ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ


# ಸ್ವಾಭಿಮಾನಿ ಸಹಕಾರಿ

Swabhimani Sahakari


Volume - 12
Issue - 10
Pages - 28
₹ - 12
October - 2015




ಶ್ರೀ ಚಾಮುಂಡೇಶ್ವರಿ
ಸಿಂಹಾ ವಾಹಿನಿ ಮಹಿಶಾಸುರ ಮರ್ಧಿನಿ
ಹರನೇ ತಾನೊಲಿದ ಶೃಂಗಾರ ಲಹರಿ
ಹರಿಯೇ ಮರುಳಾದ ಮಹದೈಸಿರಿ
ಬ್ರಹ್ಮನೆ ಬೆರಗಾದ ವಾಗೈಶ್ವರಿ
ಕರ್ಣಾಟ ಸಾಮ್ರಾಜ್ಯ ಕಾಮೇಶ್ವರಿ



ಅಕ್ಟೋಬರ್ 2,
ಮಹಾತ್ಮ ಗಾಂಧೀಜಿ ಮತ್ತು
ಲಾಲ್ ಬಹದ್ದೂರ್ ಶಾಸ್ತ್ರೀ
ಅವರುಗಳನ್ನ
ನೆನವ ದಿನ



ನವರಾತ್ರಿ, ಮೊಹರಂ,
ವಾಲ್ಮೀಕಿ ಜಯಂತಿ ಶುಭಾಶಯಗಳು





# “ಸಹಕಾರ ಮತ್ತು ಪತ್ರಿಕೋದ್ಯಮ” ವಾಸ್ತವಾಂಶಗಳನ್ನು ತೆರೆದಿಟ್ಟ ವಿಚಾರ ಸಂಕಿರಣ



ರಾಜ್ಯದ ಎಲ್ಲಾ ಸಹಕಾರಿ ಬಂಧುಗಳಿಗೆ ಗಾಂಧೀ ಜಯಂತಿ, ವಿಜಯದಶಮಿ ಹಾಗೂ ವಾಲ್ಮೀಕಿ ಜಯಂತಿಯ ಸಂದರ್ಭದಲ್ಲಿ ಸಹಕಾರ ಕ್ಷೇತ್ರವೆಂಬ ಆರ್ಥಿಕ ಅಭಿವೃದ್ಧಿಯ ಆಯುಧವನ್ನು ಎಲ್ಲಾ ಸಹಕಾರಿ ಬಂಧುಗಳು ಶುದ್ಧ ಮನಸ್ಸಿನಿಂದ ಪೂಜೆ ಮಾಡಿ, ಈ ಕ್ಷೇತ್ರದ ಮೂಲಕ ಆರ್ಥಿಕ ಹಾಗೂ ಸಾಮಾಜಿಕ ಸಮಾನತೆಯ ವಿಜಯ ಸಾಧಿಸೋಣ. ಭಗವಂತನು ಎಲ್ಲರಿಗೂ ಸುಖ, ಶಾಂತಿ, ನೆಮ್ಮದಿಯನ್ನು, ಕತೃತ್ವ ಶಕ್ತಿಯನ್ನು ದಯಪಾಲಿಸಲಿ ಎಂದು ಹಾರೈಸುತ್ತೇನೆ.

ಮೈಸೂರಿನಲ್ಲಿ ದಿನಾಂಕ : 18.09.2015ರಂದು ಮೈಸೂರು ಜಿಲ್ಲೆಯ ಪತ್ರಕರ್ತರ ಸಂಘದ ಸಹಯೋಗದೊಂದಿಗೆ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ‘ಸಹಕಾರ ಮತ್ತು ಪತ್ರಿಕೋದ್ಯಮ’ ವಿಚಾರ ಸಂಕಿರಣ ಅತ್ಯಂತ ಯಶಸ್ವಿಯಾಗಿ ನಡೆದಿರುವುದು ಪತ್ರಿಕೋದ್ಯಮ ಮಿತ್ರರು ಸಹಕಾರ ಚಳುವಳಿಯ ಸಾಧನೆಗಳನ್ನು ಮೆಚ್ಚಿ, ಸಹಕಾರ ಕ್ಷೇತ್ರ ಹಾಗೂ ಪತ್ರಿಕೋದ್ಯಮ ಈ ಎರಡು ವ್ಯವಸ್ಥೆಗಳು ದೇಶದ ಅಭಿವೃದ್ಧಿಯ ಕಾರ್ಯದಲ್ಲಿಯೇ ತೊಡಗಿಸಿಕೊಂಡಿರುವ ವಾಸ್ತವಾಂಶವನ್ನು ಒಪ್ಪಿಕೊಳ್ಳುವುದರ ಜೊತೆಗೆ ಸಹಕಾರ ಕ್ಷೇತ್ರದ ಸಾಧನೆಗಳನ್ನು ಯಶೋಗಾಥೆಗಳ ಮೂಲಕ ಜನರಿಗೆ ತಲುಪಿಸುವಲ್ಲಿ ಕಾರ್ಯೋನ್ಮುಖವಾಗುವುದು ಅತ್ಯಂತ ಅವಶ್ಯಕ ಎಂದು ಸಾರಿರುವುದು ಸಹಕಾರಿಗಳಿಗೆ ಸಂತೋಷ ನೀಡುವ ವಿಚಾರ. ಸಂಯುಕ್ತ ಸಹಕಾರಿಯ ಈ ವಿನೂತನ ಪ್ರಯತ್ನ ಸಾರ್ಥಕವಾಗಿದೆ ಮತ್ತು ಈ ತರಹದ ವಿಚಾರ ಸಂಕಿರಣಗಳು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಆಗುವುದು ಅವಶ್ಯಕ ಎಂದು ಅಭಿಪ್ರಾಯ ವ್ಯಕ್ತವಾಗಿರುವುದು ಸ್ವಾಗತಾರ್ಹ ಬೆಳವಣಿಗೆ.

ಮೈಸೂರಿನಲ್ಲಿ ನಡೆದ ಈ ಕಾರ್ಯಾಗಾರದಲ್ಲಿ ರಾಜ್ಯದ ಎಲ್ಲಾ ಪ್ರಮುಖ ದಿನಪತ್ರಿಕೆಗಳ ಸ್ಥಳೀಯ ಮುಖ್ಯಸ್ಥರು, ವರದಿಗಾರರು, ವಿದ್ಯುನ್ಮಾನ ವ್ಯವಸ್ಥೆಗಳ ಸ್ಥಳೀಯ ಮುಖ್ಯಸ್ಥರು ಭಾಗವಹಿಸಿ, ತಮ್ಮ ಅಭಿಪ್ರಾಯಗಳನ್ನು ಮಂಡಿಸುವುದರ ಜೊತೆಗೆ ಸಹಕಾರ ಚಳುವಳಿಯ ಪ್ರಚಲಿತ ವಿಷಯಗಳು, ದೇಶದ ಅರ್ಥವ್ಯವಸ್ಥೆಗೆ ಸಹಕಾರ ಕ್ಷೇತ್ರದ ಕೊಡುಗೆ ಹಾಗೂ ಸೌಹಾರ್ದ ಸಹಕಾರ ಕ್ಷೇತ್ರದ ಪ್ರಗತಿ ಹಾಗೂ ಕಾರ್ಯಚಟುವಟಿಕೆಗಳ ಅಧ್ಯಯನಕ್ಕಾಗಿ ಏರ್ಪಡಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿಯೂ ಆಸಕ್ತಿಯಿಂದ ಪೂರ್ಣಪ್ರಮಾಣದಲ್ಲಿ ಭಾಗವಹಿಸಿ, ಪ್ರಯೋಜನ ಪಡೆದು, ಮುಂಬರುವ ದಿನಗಳಲ್ಲಿ ಸಹಕಾರ ಕ್ಷೇತ್ರದ ಸಾಧನೆಗಳನ್ನು ಯಶೋಗಾಥೆಗಳನ್ನು ಹಾಗೂ ನೈಜ ವಿಷಯಗಳನ್ನು ಪ್ರಕಟಿಸುವ ಪ್ರಯತ್ನವನ್ನು ಮಾಡಲಾಗುವುದು. ಸಾರ್ವಜನಿಕರ ಗಮನ ಸೆಳೆಯುವುದಕ್ಕಾಗಿ ಮತ್ತು ಸಮಾಜದ ಬೇರೆಯವರು ಎಚ್ಚೆತ್ತುಕೊಳ್ಳುವ ಅಗತ್ಯತೆಯ ಹಿನ್ನೆಲೆಯಲ್ಲಿ ಈ ಕ್ಷೇತ್ರದ ವೈಫಲ್ಯಗಳನ್ನು ಪ್ರಕಟಿಸುವ ನಿಟ್ಟಿನಲ್ಲಿ ಪತ್ರಿಕೋದ್ಯಮ ಕಾರ್ಯನಿರ್ವಹಿಸುತ್ತದೆ ಎಂದು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷರು ಹೇಳಿರುವುದು ಸಹಕಾರ ಕ್ಷೇತ್ರದ ಅಭಿವೃದ್ಧಿಯ ದೃಷ್ಟಿಯಿಂದ ಸ್ವಾಗತಾರ್ಹ ಹಾಗೂ ಸಂತೋಷದ ವಿಷಯ.

‘ಸಹಕಾರ ಮತ್ತು ಪತ್ರಿಕೋದ್ಯಮ’ ವಿಚಾರ ಸಂಕಿರಣ ಮೈಸೂರಿನಿಂದ ಪ್ರಾರಂಭವಾಗಿದೆ. ಪ್ರಸಕ್ತ ಸಾಲಿನಲ್ಲಿ ರಾಜ್ಯದ 4 ವಿಭಾಗದಲ್ಲಿ ಒಂದೊಂದು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತದೆ. ಸ್ಥಳೀಯ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಸಹ ಇಂತಹ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದರ ಜೊತೆಗೆ ಸ್ಥಳೀಯ ಪತ್ರಿಕಾ ಪ್ರತಿನಿಧಿಗಳಿಗೆ ನಿಮ್ಮ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳು, ಸಾಧನೆ ಹಾಗೂ ವಿಶೇಷತೆಗಳ ಬಗ್ಗೆ ಮಾಹಿತಿಯನ್ನು ನಿರಂತರವಾಗಿ ನೀಡುವ ಕಾರ್ಯದಲ್ಲಿ ಸಂಯುಕ್ತ ಸಹಕಾರಿಯ ಜೊತೆಗೆ ಕೈಜೋಡಿಸುವುದು ಅಗತ್ಯ.

**“ಸಾರ್ವಜನಿಕರ ಗಮನ ಸೆಳೆಯುವುದಕ್ಕಾಗಿ ಮತ್ತು ಸಮಾಜದ ಬೇರೆಯವರು ಎಚ್ಚೆತ್ತುಕೊಳ್ಳುವ ಅಗತ್ಯತೆಯ ಹಿನ್ನೆಲೆಯಲ್ಲಿ ಈ ಕ್ಷೇತ್ರದ ವೈಫಲ್ಯಗಳನ್ನು ಪ್ರಕಟಿಸುವ ನಿಟ್ಟಿನಲ್ಲಿ ಪತ್ರಿಕೋದ್ಯಮ ಕಾರ್ಯನಿರ್ವಹಿಸುತ್ತದೆ ಎಂದು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷರು ಹೇಳಿರುವುದು ಸಹಕಾರ ಕ್ಷೇತ್ರದ ಅಭಿವೃದ್ಧಿಯ ದೃಷ್ಟಿಯಿಂದ ಸ್ವಾಗತಾರ್ಹ ಹಾಗೂ ಸಂತೋಷದ ವಿಷಯ.”**

▸▸ **ಗುರುನಾಥ ಜಾಂತಿಕರ,** ಅಧ್ಯಕ್ಷರು

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಗುರುನಾಥ ಜಾಂತಿಕರ
ಗೌರವ ಅಧ್ಯಕ್ಷರು

ಶ್ರೀ ಹೆಚ್.ವಿ.ರಾಜೀವ
ಗೌರವ ಉಪಾಧ್ಯಕ್ಷರು

ಶ್ರೀ ಎಸ್.ಆರ್.ಸತೀಶಚಂದ್ರ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ್
ಸಂಪಾದಕರು

ಶ್ರೀ ವಿ.ಜೆ.ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು


## ಒಳ ಪುಟಗಳಲ್ಲಿ . . .


ಸಂಯುಕ್ತ ಸಹಕಾರಿಗೆ ನಿವೇಶನ ಖರೀದಿ: ........................................5

"ಮೈಸೂರಿನಲ್ಲಿ ಸಹಕಾರ ಹಾಗೂ ಪತ್ರಿಕೋದ್ಯಮ ವಿಚಾರ ಸಂಕೀರಣ".......7/8

ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಿಗೆ ಚಂದ್ರವನ ಆಶ್ರಮದಲ್ಲಿ ಕಾರ್ಯಕ್ಷಮತೆ ಅಭಿವೃದ್ಧಿ ಶಿಬಿರ ........................................8

ಸೌಹಾರ್ದ ಸಹಕಾರಿ ಹಾಗೂ ಸಂಯುಕ್ತ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಚಿಂತನೆ ಮಾಡಿ – ಗುರುನಾಥ ಜಾಂತಿಕರ ಕಿವಿಮಾತು.................... 9

ಮೈಸೂರು ವಿಶ್ವವಿದ್ಯಾಲಯದ ಶತಮಾನೋತ್ಸವ ಕಾರ್ಯಕ್ರಮಗಳ ಅಂಗವಾಗಿ "ಸರಣಿ ಉಪನ್ಯಾಸ" ಮಾಲಿಕೆ .................................. 10

ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ ಉಪಾಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳ ಸಂಪರ್ಕ ಸಭೆ ......................... 11

ಸೌಹಾರ್ದ ಸಹಕಾರಿಗಳಿಗೆ ಹಾಗೂ ಸಹಕಾರ ಸಂಘಗಳಿಗೆ ಆದಾಯ ತೆರಿಗೆಯಿಂದ ವಿನಾಯಿತಿ – ಧಾರವಾಡ ಹೈಕೋರ್ಟ್‌ನಿಂದ ಮಹತ್ವದ ತೀರ್ಪು ................................................................................ 12

ಸಂಯುಕ್ತ ಸಹಕಾರಿ ಮುಂಬರುವ ಕಾರ್ಯಕ್ರಮಗಳು...................... 13

ಸೌಹಾರ್ದ ಸಹಕಾರಿ ಸಮಾಚಾರಗಳು ಛಾಯಾಚಿತ್ರಗಳು........................ ...........................................................................14/15/16/17/18/19/20

ನಿಮ್ಮ ಪ್ರಶ್ನೆ ನಮ್ಮ ಉತ್ತರ ............................................................ 21

ಸಹಕಾರಿ ಚಳುವಳಿಯ ನೇತಾರ ವೈಕುಂಠ ಮೆಹತಾ...................... 22

ಕೇರಳ ಸಹಕಾರಿ ಕಾಯ್ದೆ ಹಾಗೂ ಸಹಕಾರ ಸಂಸ್ಥೆಗಳು ಅಧ್ಯಯನ ಯೋಗ್ಯ – ಗುರುನಾಥ ಜಾಂತಿಕರ......................................... 23/24

RBI NEWS - SEPTEMBER 2015 K.Vittal Shetty ................................................................................ 25/26

ವ್ಯಾಪಾರೋದ್ಯಮ ಮತ್ತು ಸಹಕಾರಿ ಸಂಸ್ಥೆಗಳಲ್ಲಿ ಸೇವೆಗಳನ್ನು ವೃದ್ಧಿಪಡಿಸುವ ಪದ್ಧತಿಗಳು.......................................... 27/28


# ಸಂಪಾದಕೀಯ

## ಸಹಕಾರ ಸಂಸ್ಥೆಗಳಲ್ಲಿ ಬಹುವಿಧ ವ್ಯವಹಾರಗಳ ನಿರ್ವಹಣೆಗೆ ಕೇರಳ ಮಾದರಿ ಅನುಕರಣೀಯ

ರಾಜ್ಯದ ಸಹಕಾರ ಚಳವಳಿಯಲ್ಲಿ ವಿಶೇಷವಾಗಿ ವೇಗವಾಗಿ ಬೆಳೆಯುತ್ತಿರುವ ಸೌಹಾರ್ದ ಸಹಕಾರಿ ಚಳವಳಿಗೆ ತನ್ನ ವ್ಯವಹಾರಗಳಲ್ಲಿ ಬಹುವಿಧ ಚಟುವಟಿಕೆಗಳನ್ನು ಅಳವಡಿಸುವುದು ಇಂದಿನ ಅವಶ್ಯತೆಯಾಗಿದೆ. ಇತ್ತೀಚೆಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರ ನೇತೃತ್ವದಲ್ಲಿ ಹಿರಿಯ ಅಧಿಕಾರಿಗಳ ತಂಡ ಕೇರಳ ರಾಜ್ಯದ ಸಹಕಾರಿ ಕಾಯ್ದೆ, ಸಹಕಾರಿ ವ್ಯವಸ್ಥೆ ಅಧ್ಯಯನದ ಜೊತೆಗೆ ಕೆಲವು ಸಹಕಾರಿ ಸಂಸ್ಥೆಗಳ ಭೇಟಿ, ಅಧ್ಯಯನ ಪ್ರವಾಸ ಅವಧಿಯಲ್ಲಿ ಕಂಡ ಕೆಲವು ಬಹುವಿಧ ಚಟುವಟಿಕೆಗಳನ್ನು ಕರ್ನಾಟಕದಲ್ಲಿ ಸಹಕಾರ ಸಂಸ್ಥೆಗಳು ಅಳವಡಿಸಿ, ಸದಸ್ಯರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿ ಸಾಧಿಸಬಹುದಾಗಿದೆ.

ಸಹಕಾರಿ ತತ್ವಗಳಲ್ಲಿ ಅತ್ಯಂತ ಮಹತ್ವದ್ದಾಗಿರುವ ಸಾಮಾಜಿಕ ಕಳಕಳಿ ಎಂಬ ತತ್ವದ ಅನುಷ್ಠಾನವನ್ನು ಕೇರಳದಲ್ಲಿ ಕಾಣಬಹುದಾಗಿದೆ. ಇಂದಿನ ಪೈಪೋಟಿ ಯುಗದಲ್ಲಿ ಸಹಕಾರಿ ಸಂಸ್ಥೆಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಸಮಾಜದ ಅವಿಭಾಜ್ಯ ಅಂಗವಾಗಿ ದೇಶದ ಅರ್ಥ ವ್ಯವಸ್ಥೆಯ ಮುಖ್ಯವಾಹಿನಿಯಲ್ಲಿ ಕಾರ್ಯನಿರ್ವಹಿಸಬೇಕಾಗಿದೆ. ಸಹಕಾರಿ ಸಂಸ್ಥೆಗಳು ಸಾಂಪ್ರದಾಯಿಕ ಲೇವಾದೇವಿ ವ್ಯವಹಾರಗಳನ್ನು ಮಾಡುವುದರ ಜೊತೆಗೆ ಸಾಮಾಜಿಕ ಹಿತವನ್ನು ಗಮನದಲ್ಲಿಟ್ಟು ಸಮಾಜ ಮುಖಿಯಾಗಿ ಹಲವಾರು ಸೇವಾಧಾರಿತ ಹಾಗೂ ಬಡ್ಡಿಯೇತರ ಕಾರ್ಯಗಳನ್ನು ನಿರ್ವಹಿಸುವುದು ಅವಶ್ಯಕ. ಇದಕ್ಕಾಗಿ ಸಹಕಾರಿ ಸಂಸ್ಥೆಗಳ ಪದಾಧಿಕಾರಿಗಳು ಕೇರಳ ರಾಜ್ಯದ ಸಹಕಾರಿ ಸಂಸ್ಥೆಗಳನ್ನು ಅಧ್ಯಯನ ಮಾಡುವುದರ ಜೊತೆಗೆ ಅವುಗಳನ್ನು ಅನುಷ್ಠಾನಗೊಳಿಸುವಲ್ಲಿ ಮುಂದಾಗಬೇಕು.

ಆರ್ಥಿಕ ಚಟುವಟಿಕೆಗಳ ಜೊತೆಗೆ ವಿಶೇಷವಾಗಿ ಶಿಕ್ಷಣ, ಆರೋಗ್ಯ, ಸಾಮಾಜಿಕ ಅಭಿವೃದ್ಧಿಯ ಕಳಕಳಿಯಿಂದ ಬಹುವಿಧ ಚಟುವಟಿಕೆಗಳಿಗೆ ಆದ್ಯತೆ ನೀಡುವುದು. ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಶಿಕ್ಷಣ ಹಾಗೂ ಆರೋಗ್ಯದ ಸೌಲಭ್ಯಗಳನ್ನು, ಗ್ರಾಮಾಂತರ ಪ್ರದೇಶದ ಜನರ ಆರ್ಥಿಕ ಸಾಮರ್ಥ್ಯಗಳ ಅವಕಾಶದ ಒಳಗೆ ಕೈಗೆಟುಕುವ ಬೆಲೆಗಳಲ್ಲಿ ಒದಗಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಬಗ್ಗೆ ಕ್ರಮವಿಡಬಹುದು. ಶಾಲಾ ಕಾಲೇಜುಗಳನ್ನು ನಡೆಸುವುದು, ದಿನಬಳಕೆಯ ಸಾಮಾನುಗಳನ್ನು ವ್ಯಾಪಾರ ಮಾಡುವುದು, ನಿರಂತರ ಆರೋಗ್ಯ ತಪಾಸಣೆ ವ್ಯವಸ್ಥೆ, ಔಷಧಿ ಮಳಿಗೆಗಳನ್ನು ತೆರೆಯುವುದು, ಪೆಟ್ರೋಲ್ ಬಂಕ್‌ಗಳನ್ನು ತೆರೆಯುವುದು, ಸದಸ್ಯ ಉತ್ಪಾದಿತ ವಸ್ತುಗಳ ಸಾಗಾಣಿಕೆ ವ್ಯವಸ್ಥೆ, ನಗರಗಳಿಗೆ ಹಾಗೂ ದೂರದ ಪ್ರದೇಶಗಳಿಗೆ ವಾಹನ ಹಾಗೂ ಪ್ರಯಾಣ ಸೌಕರ್ಯ, ಪ್ರವಾಸೋದ್ಯಮ ಅಭಿವೃದ್ಧಿ ಕಾರ್ಯ, ಸದಸ್ಯರ ಗೃಹ ಕೈಗಾರಿಕಾ ವಸ್ತುಗಳ, ಅರಣ್ಯ ವಸ್ತುಗಳ ಸಂಗ್ರಹ, ಸಂಸ್ಕರಣ ಮತ್ತು ಮಾರಾಟ ವ್ಯವಸ್ಥೆ ಮಾಡುವುದು, ಗ್ರಾಮದ ಅಥವಾ ಸಹಕಾರ ಸಂಸ್ಥೆಯ ವ್ಯಾಪ್ತಿಯಲ್ಲಿ ಯುವಕರಿಗೆ ಗ್ರಾಮೀಣ ಮಹಿಳೆಯರಿಗೆ ಸ್ವಯಂ ಉದ್ಯೋಗ ಸೃಷ್ಟಿ ಮಾಡುವುದರ ಜೊತೆಗೆ ಸಹಕಾರಿ ಸಂಸ್ಥೆಯ ವ್ಯವಹಾರಗಳ ನಿರ್ವಹಣೆಗೆ ಸ್ಥಳೀಯ ಜನರಿಗೇ ವಿವಿಧ ವಿಷಯಗಳಿಗೆ ಸಂಬಂಧಿಸಿದ ತರಬೇತಿ ವ್ಯವಸ್ಥೆಗಳನ್ನು ಮಾಡಿ ಉದ್ಯೋಗ ನೀಡಿ ಸದಸ್ಯರಲ್ಲಿ ಸಹಕಾರ ಸಂಸ್ಥೆಯ ಬಗ್ಗೆ ಆಸಕ್ತಿ ಕಾಳಜಿ ನಿಷ್ಠೆ ಬೆಳವಣಿಗೆಗೆ ಕ್ರಮವಿಡುವುದು, ಇವುಗಳ ಜೊತೆಗೆ ಸ್ಥಳೀಯ ಅಗತ್ಯಕ್ಕನುಗುಣವಾಗಿ ಇತರೆ ಹಲವಾರು ವಿಧವಾದ ಸೇವಾ ಸೌಲಭ್ಯಗಳನ್ನು ಒದಗಿಸಿದಲ್ಲಿ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಇದೊಂದು ಕಾಯಕಲ್ಪವಾಗುವುದರಲ್ಲಿ ಸಂದೇಹವಿಲ್ಲ.

## ಧರ್ಮಕರ್ಮ

ಸತ್ಯವು ಅವಿನಾಶಿ, ಅಚಲ, ಅಪರಿಮಿತ, ತ್ರಿಕಾಲಾಬಾಧಿತ, ಆದಿಮಧ್ಯಾಂತ ರಹಿತ. ಈ ವೈಶ್ವಿಕ ಸತ್ಯವು ನುಡಿಯಲ್ಲಿ ವ್ಯಕ್ತವಾದರೆ ಅದು ವಾಚಿಕ ಸತ್ಯ, ನಡೆಯಲ್ಲಿ ವ್ಯಕ್ತವಾದರೆ ಅದು ಸದಾಚಾರ, ಸದ್ಧರ್ಮ! ನಮ್ಮ ನುಡಿಯಲ್ಲಿ, ನಮ್ಮ ನಡೆಯಲ್ಲಿ ಸತ್ಯವು ಅಳವಡಬೇಕಾದರೆ ನಮ್ಮ ಹೃದಯಶುದ್ಧಿಗಾಗಿ ನಾವು ಮಾಡುವ ಕರ್ಮಗಳಿಗೆ ಧರ್ಮಕರ್ಮ ಎಂದು ಕರೆಯುತ್ತಾರೆ.




ಮನೆಯ ಮೂಲೆ–ಮೂಲೆಯಲ್ಲಿ ಕಸ ಬಿದ್ದಿದ್ದರೆ, ಅದು ಅರಮನೆಯಾಗಿದ್ದರೂ, ಸೆರೆಮನೆಯೇ! ಧೂಳು ಮೆತ್ತಿದ ಕನ್ನಡಿ ಎಷ್ಟೇ ದೊಡ್ಡದಾಗಿದ್ದರೂ ಅದು ನಮ್ಮ ಮುಖವನ್ನು ತೋರಿಸಲಾರದು. ಚಿನ್ನದ ಪಾತ್ರೆಯಾಗಿದ್ದರೂ ಮಲಿನವಾಗಿದ್ದರೆ ಅದು ನಿಷ್ಪ್ರಯೋಜಕ.

**ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೋ?**
**ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ**
**ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೋ?**
**ತನುವಿನೊಳಗೆ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ**
**ಮನೆಯೊಳಗೆ ಮನೆಯೊಡೆಯನಿಲ್ಲ ಕೂಡಲಸಂಗಮದೇವ.**

ಮನೆಯೊಳಗೆ ಕಸ ತುಂಬಿದ್ದರೆ, ಹೊಸ್ತಿಲಲ್ಲಿ ಹುಲ್ಲು ಬೆಳೆದಿದ್ದರೆ, ಆ ಮನೆಯಲ್ಲಿ ಮನೆಯವರಿಲ್ಲವೆಂದೇ ಅರ್ಥ.

ನಮ್ಮ ತನುವೆಂಬ ಈ ಮನೆಯ ಹೊಸ್ತಿಲಲ್ಲಿ ಎಂದರೆ ಮುಖದಲ್ಲಿ 'ಹುಸಿಯ ಹುಲ್ಲು, ಸುಳ್ಳು ತುಂಬಿಕೊಂಡಿದ್ದರೆ, ಮನವೆಂಬ ಮನೆಯೊಳಗೆ ಪ್ರಾಪಂಚಿಕ ವಿಷಯ ವಾಸನೆ ಅಥವಾ ಆಸೆಯ ಧೂಳು ಬಿದ್ದಿದ್ದರೆ, ಜೀವಾತ್ಮನೆಂಬ ಈ ಮನೆಯೊಡೆಯನು ಜಾಗೃತವಾಗಿಲ್ಲವೆಂದೇ ಅರ್ಥ. ಈ ಮನೋಮಾಲಿನ್ಯವೇ ಎಲ್ಲ ಕೋಲಾಹಲಕ್ಕೆ ಕಾರಣ. ಅದರಿಂದ ನಮಗೆ ಒಳ್ಳೆಯದು ಕಾಣುವುದಿಲ್ಲ, ಕೇಳಿಸುವುದಿಲ್ಲ, ರುಚಿಸುವುದಿಲ್ಲ! ಆಗ ಮನುಷ್ಯನು ಕೆಟ್ಟದ್ದನ್ನೇ ನೋಡುತ್ತಾನೆ, ಹೇಳುತ್ತಾನೆ, ಕೆಟ್ಟದ್ದನ್ನೇ ತಿನ್ನುತ್ತಾನೆ, ಕುಡಿಯುತ್ತಾನೆ. ಇದುವೇ ಅನಾಚಾರ, ಅಧರ್ಮ! ಯಾವಾಗ ಮನುಷ್ಯನು ಗುರು–ದೇವರ ಕರುಣೆಯಿಂದ ಎಚ್ಚೆತ್ತು ಸನ್ಮಾರ್ಗದಲ್ಲಿ ನಡೆಯುತ್ತಾನೋ, ಆಗ ಆತನ ಅಂತರಂಗ ಅಥವಾ ಮನಸ್ಸು ಪರಿಶುದ್ಧವಾಗಿ ಜೀವನದಲ್ಲಿ ಪರಮಶಾಂತಿ ನೆಲೆಸುತ್ತದೆ! ಆದುದರಿಂದ, ನಮ್ಮ ಋಷಿ–ಮುನಿಗಳು 'ಸದಾಚಾರೋ ಹೀ ಧರ್ಮಃ' 'ಸದಾಚಾರವೇ ಸದ್ಧರ್ಮ' ಎಂದು ಹೇಳಿದರು.

ಒಳ್ಳೆಯ ಕೆಲಸಗಳನ್ನು ಮಾಡುವುದೇ ದೇಹಕ್ಕೆ ಶೃಂಗಾರ. ಪರಮಸತ್ಯ ಪರಮಾತ್ಮನನ್ನು ಅನುಭವಿಸುವುದೇ ಮನಕ್ಕೆ ಶೃಂಗಾರ. ಆ ಪರಶಿವ ಪರಮಾತ್ಮನ ಅರಿವು ಮಾಡಿಕೊಳ್ಳುವುದೇ ನಮ್ಮ ಆತ್ಮಂಗೆ ಅಲಂಕಾರ! ಇನ್ನು ಸತ್ಯವನ್ನರಿತ ಶಿವಯೋಗಿಗಳಿಗೆ ಶಿವಶರಣರ ಸಂಗವೇ ಶೃಂಗಾರ!

ನಾವು ಕೇವಲ ದೋಷವನ್ನೇ ಹುಡುಕುತ್ತಾ ಹೋದರೆ, ನಮಗೆ ಈ ಜಗತ್ತಿನಲ್ಲಿ ಒಳ್ಳೆಯದು ಕಾಣುವುದೇ ಇಲ್ಲ! ಆಗಸದಲ್ಲಿ ತೇಲುವ ಮೇಘಗಳು ನಮಗೆ ಕಪ್ಪಾಗಿ ಕಂಡರೂ, ಅವುಗಳು ಅಂತರಂಗದಲ್ಲಿ ಪ್ರಪಂಚವನ್ನೇ ಪೋಷಿಸುವ ಅಮೃತದ ಜಲಧಾರೆ ಇದೆ ಎನ್ನುವುದನ್ನು ನಾವು ಮರೆಯಬಾರದು.

ಹೃದಯಶುದ್ಧಿಗೆ, ಸತ್ಯಸಾಕ್ಷಾತ್ಕಾರಕ್ಕೆ ಸಹಕಾರಿಯಾದ ಅನ್ನದಾನ, ವಸ್ತ್ರದಾನ, ಆಶ್ರಯದಾನ, ವಾತ್ಸಲ್ಯದಾನ ಮೊದಲಾದ ಸತ್ಕಾರ್ಯಗಳೇ ಧರ್ಮಕಾರ್ಯಗಳು. ಇದುವೇ ಸದ್ಧರ್ಮ ಸದಾಚಾರ!!

## ಇ–ಸ್ಟ್ಯಾಂಪ್ ಪೇಪರ್ ತಿದ್ದುಪಡಿ ಬಗ್ಗೆ ಮಾಹಿತಿ

ಒಂದು ಬಾರಿ ವಿವರಗಳನ್ನು ಭರ್ತಿ ಮಾಡಿ ಇ–ಸ್ಟ್ಯಾಂಪ್‌ನ್ನು ಮುದ್ರಿಸಿದ ನಂತರ ಅದನ್ನು ಯಾವುದೇ ಕಾರಣಗಳಿಂದ ಬಿಳಿ ಶಾಹಿ ಉಪಯೋಗಿಸುವುದರಿಂದ ಅಥವಾ ಪದಗಳ ನಡುವೆ ಅಕ್ಷರ/ಸಂಖ್ಯೆ ಸೇರಿಸುವುದರಿಂದ ತಿದ್ದುಪಡಿ ಮಾಡಲು ಸಾಧ್ಯವಿರುವುದಿಲ್ಲ. ಕಾರಣ ಆನ್‌ಲೈನ್ ಮೂಲಕ ವಿವರಗಳನ್ನು ಭರ್ತಿ ಮಾಡಿ ಇ–ಸ್ಟ್ಯಾಂಪ್‌ನ್ನು ಮುದ್ರಿಸಲಾಗುವುದರಿಂದ ಇ–ಸ್ಟ್ಯಾಂಪ್ ಪೇಪರಿನ ಎಲ್ಲಾ ವಿವರಗಳು ಆನ್‌ಲೈನ್‌ನಲ್ಲಿ ಶೇಖರಣೆಗೊಂಡಿರುತ್ತದೆ.

ಆದ್ದರಿಂದ, ಯಾವುದೇ ಬದಲಾವಣೆ ಮಾಡಿದರೂ ಸಹ ಸದರಿ ಬದಲಾವಣೆ ತಂತ್ರಾಂಶದಲ್ಲಿ ಇಂಧೀಕರಣ (update) ಆಗುವುದಿಲ್ಲ. ಒಂದು ವೇಳೆ ತಾವು ತಿದ್ದುಪಡಿಯನ್ನು ಮಾಡಿದರೆ ಅಂತಹ ಇ–ಸ್ಟ್ಯಾಂಪ್ ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತದೆ ಮತ್ತು ರದ್ದುಪಡಿಸಿಕೊಂಡು ಇ–ಸ್ಟ್ಯಾಂಪ್ ಮೊತ್ತವನ್ನು ಹಿಂಪಡೆಯಲು ಆಗುವುದಿಲ್ಲ.

ತಪ್ಪಾಗಿ ಮುದ್ರಣವಾಗಿರುವ ಇ–ಸ್ಟ್ಯಾಂಪ್‌ನ್ನು ಮುದ್ರಣವಾಗಿರುವ ಸ್ವರೂಪದಲ್ಲಿಯೇ ಯಾವುದೇ ತಿದ್ದುಪಡಿಯನ್ನು ಮಾಡದೇ ಅದನ್ನು ಜಿಲ್ಲಾ ನೋಂದಣಾಧಿಕಾರಿಯವರ ಕಛೇರಿಗೆ ಹೋಗಿ ಇ–ಸ್ಟ್ಯಾಂಪ್‌ನ್ನು ರದ್ದುಪಡಿಸಿಕೊಂಡು ಮೊತ್ತವನ್ನು ಹಿಂಪಡೆಯುವ ಕ್ರಮಗಳನ್ನು ಅನುಸರಿಸತಕ್ಕದ್ದು. ಈ ಬಗ್ಗೆ ಸಂಯುಕ್ತ ಸಹಕಾರಿ ಇ–ಸ್ಟಾಂಪಿಂಗ್ ವಿಭಾಗವನ್ನು ಸಂಪರ್ಕಿಸಬಹುದಾಗಿದೆ.

# ಸಂಯುಕ್ತ ಸಹಕಾರಿಗೆ ನಿವೇಶನ ಖರೀದಿ

**ಸಂಯುಕ್ತ ಸಹಕಾರಿಗೆ ಸ್ವಂತ ನಿವೇಶನ ಹೊಂದಲು ಸರ್ವಸಮ್ಮತವಾಗಿ ಅನುಮೋದಿಸಿದ ಸೌಹಾರ್ದ ಸಹಕಾರಿಗಳಿಗೆ ಧನ್ಯವಾದಗಳು ಹಾಗೂ ದಿನಾಂಕ : 17.10.2015 ರಂದು ಏರ್ಪಡಿಸಿರುವ ಶಿಲಾನ್ಯಾಸ ಹಾಗೂ ಸಮಾವೇಶದಲ್ಲಿ ಭಾಗವಹಿಸಲು ವಿನಂತಿ.**

ಸೌಹಾರ್ದ ಸಹಕಾರ ಕ್ಷೇತ್ರದ ನೇತೃತ್ವ ವಹಿಸಿ ಕಾರ್ಯನಿರ್ವಹಿಸುತ್ತಿರುವ ಸಂಯುಕ್ತ ಸಹಕಾರಿಗೆ, ರಾಜ್ಯದ ಸೌಹಾರ್ದ ಸಹಕಾರಿಗಳ ಸಹಕಾರದಿಂದಾಗಿ ಸ್ವಂತ ನಿವೇಶನ ಹೊಂದಲು ಸಾಧ್ಯವಾಗಿದೆ. ದಿನಾಂಕ : 20.08.2015 ರಂದು ನಡೆದ ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸಂಯುಕ್ತ ಸಹಕಾರಿಗೆ ಬೆಂಗಳೂರಿನಲ್ಲಿ ಸ್ವಂತ ನಿವೇಶನ ಹೊಂದುವುದಕ್ಕಾಗಿ ಉತ್ತಮ ಸ್ಥಳದಲ್ಲಿ ನಿವೇಶನ ಖರೀದಿಸಲು ಸರ್ವಸಮ್ಮತವಾಗಿ ಅನುಮೋದನೆ ನೀಡಿದ ಸೌಹಾರ್ದ ಸಹಕಾರಿಗಳ ಸಹಕಾರಕ್ಕೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಧನ್ಯವಾದಗಳನ್ನು ಸಲ್ಲಿಸುತ್ತದೆ.

ದಿನಾಂಕ : 23.09.2015 ರಂದು ನಂ.68 (ನ್ಯೂ ನಂ.246), ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರಿನಲ್ಲಿರುವ 7020 ಚದರ ಅಡಿಯ ನಿವೇಶನವನ್ನು ಸಂಯುಕ್ತ ಸಹಕಾರಿಯ ಹೆಸರಿಗೆ ನೋಂದಾಯಿಸಲಾಗಿದೆ ಎಂಬ ವಿಷಯವನ್ನು ತಮಗೆ ತಿಳಿಸಲು ತುಂಬ ಸಂತೋಷವಾಗುತ್ತಿದೆ. ರಾಜ್ಯದ ಸೌಹಾರ್ದ ಸಹಕಾರ ಕ್ಷೇತ್ರದ ಬೆಳವಣಿಗೆಯಲ್ಲಿ ಸೌಹಾರ್ದ ಸಹಕಾರಿಗಳ ಪಾತ್ರ ಅತ್ಯಂತ ಮಹತ್ವದ್ದು. ಕಡಿಮೆ ಅವಧಿಯಲ್ಲಿ ಹೆಚ್ಚಿನ ಜವಾಬ್ದಾರಿಯಿಂದ, ಗುಣಮಟ್ಟದಿಂದ ಈ ಕ್ಷೇತ್ರವನ್ನು ಬೆಳೆಸುತ್ತಿರುವ ಸೌಹಾರ್ದ ಸಹಕಾರಿಗಳ ಸಹಕಾರದಿಂದಾಗಿ ಸಂಯುಕ್ತ ಸಹಕಾರಿಗೆ ಶಾಶ್ವತವಾಗಿ ನೆಲೆ ಕಂಡುಕೊಳ್ಳುವಂತಾಗಿದೆ. ಈ ಸಹಕಾರದಿಂದಾಗಿ ಸಂಯುಕ್ತ ಸಹಕಾರಿಯ ಜವಾಬ್ದಾರಿಯೂ ಹೆಚ್ಚಿದ್ದು, ಸೌಹಾರ್ದ ಸಹಕಾರ ಕ್ಷೇತ್ರವನ್ನು ಮತ್ತಷ್ಟು ಬೆಳೆಸುವ ದೃಷ್ಠಿಯಿಂದ ಕಾರ್ಯನಿರ್ವಹಿಸಲು ಇನ್ನಷ್ಟು ಬಲ ಬಂದಂತಾಗಿದೆ. ಇನ್ನು ಮುಂದೆಯೂ ಹಾಗೂ ನಿರಂತರವಾಗಿಯೂ ತಮ್ಮೆಲ್ಲರ ಸಹಕಾರವಿರಲಿ. ಎಲ್ಲರೂ ಒಟ್ಟಿಗೆ ಸೇರಿ ಈ ಕ್ಷೇತ್ರವನ್ನು ಮುನ್ನಡೆಸೋಣ.

ಸಂಯಕ್ತ ಸಹಕಾರಿಯು ಖರೀದಿಸಿದ ನಿವೇಶನದ ಭೂಮಿ ಪೂಜೆಯನ್ನು ದಿನಾಂಕ 16.10.2015ರಂದು ನೆರವೇರಿಸಲಾಗುವುದು ಹಾಗೂ 17.10.2015ರಂದು ಏರ್ಪಡಿಸಿರುವ ಶಿಲಾನ್ಯಾಸ ಸಂದರ್ಭದಲ್ಲಿ ಸಹಕಾರಿಗಳ ಸಮಾವೇಶವನ್ನೂ ಕೂಡ ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿದೆ. ರಾಜ್ಯದ ಸನ್ಮಾನ್ಯ ಸಹಕಾರ ಸಚಿವರಾದ ಶ್ರೀ ಹೆಚ್.ಎಸ್.ಮಹದೇವಪ್ರಸಾದರವರು ಹಾಗೂ ಇನ್ನೂ ಅನೇಕ ಗಣ್ಯರು ಈ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ಆದ್ದರಿಂದ, ದಿನಾಂಕ 17.10.2015ರಂದು ಕೆನರಾ ಯೂನಿಯನ್ ಸಭಾಂಗಣ, 8ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಆಯೋಜಿಸಿರುವ ಸಹಕಾರ ಸಮಾವೇಶಕ್ಕೆ ತಾವುಗಳು ಆಗಮಿಸಿ, ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಈ ಶುಭ ಸಮಾರಂಭವನ್ನು ಯಶಸ್ವಿಗೊಳಿಸಲು ಕೋರಿದೆ.

ವಂದನೆಗಳೊಂದಿಗೆ,

| | | |
|---|---|---|
| **ಗುರುನಾಥ ಜಾಂತಿಕರ** | **ಹೆಚ್.ವಿ. ರಾಜೀವ** | **ಶರಣಗೌಡ ಜಿ. ಪಾಟೀಲ** |
| ಅಧ್ಯಕ್ಷರು | ಉಪಾಧ್ಯಕ್ಷರು | ವ್ಯವಸ್ಥಾಪಕ ನಿರ್ದೇಶಕರ |

**ಹಾಗೂ ಆಡಳಿತ ಮಂಡಲಿ ಸದಸ್ಯರು**

"ಮೈಸೂರಿನಲ್ಲಿ ಸಹಕಾರ ಹಾಗೂ ಪತ್ರಿಕೋದ್ಯಮ ವಿಚಾರ ಸಂಕೀರಣ"

# ಪತ್ರಕರ್ತರ ಸೌಹಾರ್ದ ಸಹಕಾರ ಸಂಘ ಸ್ಥಾಪನೆಗೆ ಒಲವು; ವೈಫಲ್ಯಕ್ಕಿಂತ ಸಾಧನೆಗಳ ಹಾಗೂ ಯಶೋಗಾಥೆಗಳ ಬಗ್ಗೆ ಪತ್ರಿಕೆಗಳ ಗಮನ ಅವಶ್ಯ – ಶ್ರೀ ಗುರುನಾಥ ಜಾಂತಿಕರ



**ಮೈಸೂರು ವಿಭಾಗ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಹಯೋಗದೊಂದಿಗೆ ಮೈಸೂರಿನ ವಿಂಡ್‌ಫ್ಲಾವರ್ ಹೋಟೆಲ್‌ನಲ್ಲಿ 'ಸಹಕಾರ ಮತ್ತು ಪತ್ರಿಕೋದ್ಯಮ' ಕುರಿತಾದ ವಿಚಾರ ಸಂಕೀರಣವನ್ನು ಉದ್ಘಾಟಿಸಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಸಹಕಾರ ಚಳುವಳಿಗೆ 111 ವರ್ಷಗಳ ಇತಿಹಾಸವಿದೆ. ದೇಶದ 30 ಕೋಟಿ ಜನರು ಈ ಕ್ಷೇತ್ರದಲ್ಲಿದ್ದಾರೆ. 6 ಲಕ್ಷಕ್ಕೂ ಹೆಚ್ಚು ವಿವಿಧ ರೀತಿಯ ಸಹಕಾರ ಸಂಸ್ಥೆಗಳಿವೆ. ರಾಷ್ಟ್ರ ಅಂತರರಾಷ್ಟ್ರ ಮಟ್ಟದ ಖ್ಯಾತಿಯ ಇಫ್ಕೋ, ಕ್ರಿಭ್ಕೋ, ಅಮೂಲ್, ಕ್ಯಾಂಪ್ಕೋ ಮುಂತಾದ ಸಹಕಾರ ಸಂಸ್ಥೆಗಳಿವೆ. ಶೇಕಡಾ ನೂರಕ್ಕೆ ನೂರು ಗ್ರಾಮಗಳನ್ನು ವ್ಯಾಪಿಸಿವೆ. ಉತ್ತಮವಾಗಿ ಕಾರ್ಯನಿರ್ವಹಿಸಿ, ಈ ದೇಶದ ಜನರ ಜೀವನ ಪದ್ಧತಿಯಾಗಿದೆ. ಇಂತಹ ಸಾಧನೆಗಳುಳ್ಳ ಸಹಕಾರ ಸಂಸ್ಥೆಗಳಿಗೆ ಪ್ರಚಾರ ನೀಡುವ ಬಗ್ಗೆ ಪತ್ರಿಕಾ ಮಾಧ್ಯಮದವರು ಹಾಗೂ ವಿದ್ಯುನ್ಮಾನ ಮಾಧ್ಯಮದವರು ಹೆಚ್ಚು ಆಸಕ್ತಿ ವಹಿಸಬೇಕು. ಎಲ್ಲೋ ಒಂದೆರಡು ಸಹಕಾರ ಸಂಸ್ಥೆಗಳಲ್ಲಿ ಹಣ ದುರುಪಯೋಗ ಇತ್ಯಾದಿ ಅವ್ಯವಹಾರಗಳು ನಡೆದಿರುವುದನ್ನು ಸಾರ್ವಜನಿಕರು ಗಮನ ಹರಿಸುವಂತೆ ಮಾಡಲಿ, ಆದರೆ ಹೆಚ್ಚು ವೈಭವೀಕರಿಸುವುದು ಸಹಕಾರ ಚಳುವಳಿಯ ಬೆಳವಣಿಗೆಯ ದೃಷ್ಟಿಯಿಂದ ಒಳ್ಳೆಯದಲ್ಲ ಎಂದು ಹೇಳಿದರು

## ದೇಶದ ಅಭಿವೃದ್ಧಿ ದೃಷ್ಟಿಯಿಂದ ಸಹಕಾರ ಕ್ಷೇತ್ರ ಹಾಗೂ ಸುದ್ಧಿ ಮಾಧ್ಯಮಗಳ ಪಾತ್ರ ಎರಡೂ ಒಂದೇ - ಕೆ. ದೀಪಕ, ಮೈಸೂರು ಪತ್ರಕರ್ತರ ಸಂಘದ ಅಧ್ಯಕ್ಷ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಮಾತನಾಡಿದ ಮೈಸೂರು ಪತ್ರಕರ್ತರ ಸಂಘದ ಅಧ್ಯಕ್ಷರಾದ ಶ್ರೀ ಕೆ.ದೀಪಕರವರು ದೇಶದ ಅಭಿವೃದ್ಧಿ ದೃಷ್ಟಿಯಿಂದ ಸಹಕಾರ ಕ್ಷೇತ್ರ ಹಾಗೂ ಸುದ್ಧಿ ಮಾಧ್ಯಮಗಳ ಪಾತ್ರ ಎರಡೂ ಒಂದೇ ಆಗಿದೆ. ಸಹಕಾರ ಕ್ಷೇತ್ರ ದೇಶದ ಜನರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯನ್ನು ಬಯಸಿದರೆ, ಸುದ್ಧಿ ಮಾಧ್ಯಮದವರು ದೇಶದ ಜನರಿಗೆ ದೇಶದ ಸಮಗ್ರ ಮಾಹಿತಿಯನ್ನು ಒದಗಿಸಿ, ಅವರ ಅಭಿವೃದ್ಧಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತವೆ ಎಂದು ತಿಳಿಸಿ, ಇದೊಂದು ಅತ್ಯುತ್ತಮ ಹಾಗೂ ವಿನೂತನ ಕಾರ್ಯಕ್ರಮ. ಪತ್ರಕರ್ತರಿಗೆ ಸಹಕಾರ ಕ್ಷೇತ್ರದ ಸಾಧನೆಗಳ ಬಗ್ಗೆ ಮಾಹಿತಿ ಅವಶ್ಯವಾಗಿ ಬೇಕು. ಹುಟ್ಟಿನಿಂದ ಯಾರೂ ಸರ್ವಜ್ಞರಲ್ಲ. ಇಂತಹ ಕಾರ್ಯಕ್ರಮದಿಂದಲೇ ನಾವು ವಿಷಯಗಳನ್ನು ತಿಳಿದುಕೊಂಡು ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗುವ ವರದಿಗಳನ್ನು ಪ್ರಕಟಿಸಲು ಸಾಧ್ಯವಾಗುತ್ತದೆ. ವೈಫಲ್ಯಗಳನ್ನು ಸಾರ್ವಜನಿಕರ ಗಮನಕ್ಕೆ ತರುವ ದೃಷ್ಟಿಯಿಂದ ಹಾಗೂ ಇಂತಹ ಅವ್ಯವಹಾರಗಳು ಮರುಕಳಿಸದಂತೆ ಎಚ್ಚರಿಸುವುದು ನಮ್ಮ ಕರ್ತವ್ಯವಾದುದರಿಂದ ಪ್ರಕಟಿಸಬೇಕಾಗುತ್ತದೆ. ಮುಂಬರುವ ದಿನಗಳಲ್ಲಿ ಸಹಕಾರ ಕ್ಷೇತ್ರದ ಅಭಿವೃದ್ಧಿಯ ದೃಷ್ಟಿಯಿಂದ ಸಾಧನೆ ಹಾಗೂ ಯಶೋಗಾಥೆಗಳನ್ನು ಹೆಚ್ಚು ಪ್ರಮಾಣದಲ್ಲಿ ಪ್ರಕಟಿಸುವ ಕಾರ್ಯವನ್ನು ಮೈಸೂರಿನ ಪತ್ರಕರ್ತರು ಮಾಡುತ್ತಾರೆ ಎಂದು ತಿಳಿಸಿದರು. ಪತ್ರಕರ್ತರಿಗೆ ಹಾಗೂ ಪೋಲೀಸಿನವರಿಗೆ ಬ್ಯಾಂಕುಗಳು

ಹಾಗೂ ಸಹಕಾರ ಸಂಸ್ಥೆಗಳು ಸಾಲ ನೀಡಲು ಹಿಂದೇಟು ಹಾಕುತ್ತವೆ. ಹೀಗಾಗಿ, ನಮ್ಮದೇ ಆದ ಒಂದು ಸಹಕಾರ ಸಂಸ್ಥೆಯನ್ನು ಸ್ಥಾಪಿಸುವ ಬಗ್ಗೆ ಯೋಚಿಸಲು ಈ ವಿಚಾರ ಸಂಕೀರಣ ನಮಗೆ ವೇದಿಕೆಯಾಗಿ ಪರಿಣಮಿಸಿದೆ. ಇದಕ್ಕಾಗಿ ಸಂಯುಕ್ತ ಸಹಕಾರಿಯವರನ್ನು ಅಭಿನಂದಿಸುತ್ತೇನೆ ಎಂದರು.

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ್‌ರವರು ಪ್ರಾಸ್ತಾವಿಕವಾಗಿ ಮಾತನಾಡಿ, ದೇಶದ ಅಭಿವೃದ್ಧಿಯಲ್ಲಿ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗಗಳು ಕಾರ್ಯನಿರ್ವಹಿಸುವಂತೆ ನಾಲ್ಕನೆಯ ಅಂಗವಾಗಿ ಪತ್ರಿಕಾರಂಗ ಕಾರ್ಯನಿರ್ವಹಿಸುತ್ತಿದೆ. ದೇಶದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯಲ್ಲಿ ಸಹಕಾರಿ ಕ್ಷೇತ್ರದ ಕೊಡುಗೆ ಸಾಕಷ್ಟಿದೆ. ಈ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡುವ, ಸಾರ್ವಜನಿಕರು ಈ ಕ್ಷೇತ್ರವನ್ನು ಹೆಚ್ಚು ಹೆಚ್ಚು ಬಳಸಿಕೊಳ್ಳುವ ನಿಟ್ಟಿನಲ್ಲಿ ಪತ್ರಿಕಾರಂಗ ಕಾರ್ಯನಿರ್ವಹಿಸಬೇಕಿದೆ. ಪತ್ರಿಕೆಯವರನ್ನು ಸಹಕಾರಿ ಸಂಸ್ಥೆಯವರು ಹೆಚ್ಚು ಸಂಪರ್ಕದಲ್ಲಿಟ್ಟುಕೊಂಡು, ಅವರಿಗೆ ಹೆಚ್ಚಿನ ಮಾಹಿತಿಗಳನ್ನು ಒದಗಿಸುವ ಕಾರ್ಯ ಅವಶ್ಯವಾಗಿ ಆಗಬೇಕಿದೆ ಎಂದು ತಿಳಿಸಿದರು.

ಕರ್ನಾಟಕ ಪತ್ರಕರ್ತರ ಸಂಘದ ಕಾರ್ಯದರ್ಶಿಯಾದ ಶ್ರೀ ಸಿ.ಎ.ಎಸ್.ನಾಗರಾಜ ಸ್ವಾಮಿಯವರು ಮಾತನಾಡಿ ಸಹಕಾರ ಕ್ಷೇತ್ರದಿಂದ ಉತ್ತಮ ಸಾಧನೆಗಳಾಗಿವೆ. ಆದರೆ, ಸಹಕಾರ ಕಾನೂನುಗಳು ಈ ಕ್ಷೇತ್ರದ ಬೆಳವಣಿಗೆಗೆ ಪೂರಕವಾಗಿಲ್ಲ. ಅನೇಕ ತೊಡಕುಗಳು ಇವೆ. ವಾಸ್ತವದ ನೆಲೆಗಟ್ಟು ಬಿಟ್ಟು, ಕಾಲ್ಪನಿಕತೆಗೆ ಹೆಚ್ಚು ಮಹತ್ವ ಕೊಟ್ಟು, ಕಾನೂನುಗಳನ್ನು ರಚನೆ ಮಾಡುವುದರಿಂದ ತೊಡಕುಗಳು ಆಗುತ್ತವೆ. ಸರಕಾರ ಈ ಬಗ್ಗೆ ಗಮನಹರಿಸಬೇಕು ಎಂದು ತಿಳಿಸಿದರು.

ಹಿರಿಯ ಪತ್ರಕರ್ತರಾದ ಶ್ರೀ ಅಂಶಿ ಪ್ರಸನ್ನ ಕುಮಾರ್‌ರವರು ಮಾತನಾಡಿ ಇದೊಂದು ಉತ್ತಮ ಕಾರ್ಯಾಗಾರ. ಸಹಕಾರ ಕ್ಷೇತ್ರ ಮತ್ತು ಪತ್ರಿಕಾ ರಂಗದವರು ಸಮಾಜಮುಖಿಯಾಗಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಪೂರಕ ಎಂದು ತಿಳಿಸಿದರು. ಸಹಕಾರ ಇಲಾಖೆಯ ಮೈಸೂರು ಜಿಲ್ಲೆಯ ಉಪನಿಬಂಧಕರಾದ ಶ್ರೀ ಪಿ.ಶಶಿಧರ, ವಾರ್ತಾ ಇಲಾಖೆಯ ಉಪನಿರ್ದೇಶಕರಾದ ಶ್ರೀ ಎ.ಆರ್.ಪ್ರಕಾಶ, ಮೈಸೂರು ವಿಶ್ವವಿದ್ಯಾಲಯದ ಸಂವಹನ ಹಾಗೂ ಪತ್ರಿಕೋದ್ಯಮದ ಮುಖ್ಯಸ್ಥರಾದ ಶ್ರೀ ಕೆ.ಪುಟ್ಟಸ್ವಾಮಿ, ಕ್ಯಾಂಪ್ಕೋ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್.ಆರ್.ಸತೀಶ್ಚಂದ್ರರವರು ಮುಂತಾದವರು ಮಾತನಾಡಿದರು. ಪತ್ರಕರ್ತರ ಸಂಘದ ಕಾರ್ಯದರ್ಶಿಯಾದ ಶ್ರೀ ಲೋಕೇಶಬಾಬುರವರು ವೇದಿಕೆಯಲ್ಲಿದ್ದರು. ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್‌ರವರು ಸ್ವಾಗತಿಸಿದರು. ಮೈಸೂರು ವಿಭಾಗೀಯ ಅಧಿಕಾರಿಯಾದ ಶ್ರೀ ಶಿವಕುಮಾರ ಬಿರಾದಾರರವರು ವಂದಿಸಿದರು. ಕಾರ್ಯಕ್ರಮದಲ್ಲಿ ಸಹಕಾರ ಇಲಾಖೆಯ ನಿವೃತ್ತ ಅಪರನಿಬಂಧಕರಾದ ಶ್ರೀ ಬಿ.ಎ.ಮಹದೇವಪ್ಪನವರಿಂದ "ಸಹಕಾರ ಕ್ಷೇತ್ರದ ಪ್ರಚಲಿತ ವಿಷಯಗಳು, ದೇಶದ ಅರ್ಥವ್ಯವಸ್ಥೆಯಲ್ಲಿ ಸಹಕಾರ ಕ್ಷೇತ್ರದ ಕೊಡುಗೆ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿ ಹಾಗೂ ಸಾಧನೆಗಳು" ಕುರಿತಂತೆ ಉಪನ್ಯಾಸ ಏರ್ಪಡಿಸಲಾಗಿತ್ತು.

ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಎಂ.ಬಿ.ಕಲಾಲ, ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಶ್ರೀ ಎನ್.ರಮೇಶ್, ಮೈಸೂರಿನ ಅನೇಕ ಸೌಹಾರ್ದ ಸಹಕಾರಿಗಳ ಪದಾಧಿಕಾರಿಗಳು, ಅಧಿಕಾರಿಗಳು, ಸಹಕಾರ ಇಲಾಖೆಯ ನಿವೃತ್ತ ಹಿರಿಯ ಅಧಿಕಾರಿಗಳಾದ ಶ್ರೀ ಕೃಷ್ಣದಾಸ, ಶ್ರೀ ಕೃಷ್ಣಯ್ಯಗೌಡ, ಮೈಸೂರು ವಿಶ್ವವಿದ್ಯಾಲಯದ ಪ್ರೊ. ವಿಶ್ವನಾಥ ಹಾಗೂ ಅಧಿಕಾರಿಗಳು ಸೇರಿದಂತೆ 125ಕ್ಕೂ ಹೆಚ್ಚು ಜನರು ಕಾರ್ಯಕ್ರಮದಲ್ಲಿ ಭಾಗವಹಿಸಿ, ಪ್ರಯೋಜನ ಪಡೆದರು.



ಉಪಸ್ಥಿತ ಪತ್ರಕರ್ತರು

**ಶ್ರೀ ಎಸ್.ಆರ್.ಸತೀಶ್ಚಂದ್ರರವರಿಗೆ ಅಭಿನಂದನೆ:** ಇದೇ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರು ಹಾಗೂ ನಿರ್ದೇಶಕರು, ಪುತ್ತೂರಿನ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷರೂ ಆದ ಶ್ರೀ ಎಸ್.ಆರ್.ಸತೀಶ್ಚಂದ್ರರವರು ರಾಷ್ಟ್ರಮಟ್ಟದ ಅಡಿಕೆ ಬೆಳೆಗಾರರ ಹಿತ ರಕ್ಷಣೆಗಾಗಿಯೇ ಸ್ಥಾಪಿತವಾಗಿರುವ ಕ್ಯಾಂಪ್ಕೋ ಸಂಸ್ಥೆಯ ಅಧ್ಯಕ್ಷರಾಗಿ ಆಯ್ಕೆಯಾಗಿರುವುದರಿಂದ ಅವರನ್ನು ಸನ್ಮಾನಿಸಲಾಯಿತು.

## ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಿಗೆ ಚಂದ್ರವನ ಆಶ್ರಮದಲ್ಲಿ ಕಾರ್ಯಕ್ಷಮತೆ ಅಭಿವೃದ್ಧಿ ಶಿಬಿರ



### ಕರ್ತವ್ಯದಲ್ಲಿ ಶ್ರದ್ಧೆ ಮತ್ತು ನಿಷ್ಠೆಗಳ ಕೊರತೆಯಾಗಬಾರದು; ವೃತ್ತಿ ಪ್ರೇಮ ಬೆಳೆಸಿಕೊಳ್ಳಬೇಕು – ಶ್ರೀ ತ್ರಿನೇತ್ರ ಮಹಾಂತ ಶಿವಯೋಗೀಶ್ವರ ಸ್ವಾಮೀಜಿ

ದಿನಾಂಕ : 12, 13 ಸೆಪ್ಟೆಂಬರ್ 2015 ರಂದು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಪಶ್ಚಿಮವಾಹಿನಿಯಲ್ಲಿರುವ ಚಂದ್ರವನ ಆಶ್ರಮದಲ್ಲಿ ಸಂಯುಕ್ತ ಸಹಕಾರಿಯ ಎಲ್ಲಾ ಸಿಬ್ಬಂದಿಯವರಿಗಾಗಿ "ಕಾರ್ಯಕ್ಷಮತೆ ಅಭಿವೃದ್ಧಿ ಶಿಬಿರ"ವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಚಂದ್ರವನ ಆಶ್ರಮದ ಶ್ರೀ ತ್ರಿನೇತ್ರ ಮಹಾಂತ ಶಿವಯೋಗೀಶ್ವರ ಸ್ವಾಮೀಜಿಯವರು ಉದ್ಘಾಟಿಸಿ, ಸಿಬ್ಬಂದಿಯವರಲ್ಲಿ ಜ್ಞಾನ ವಿವೇಕಗಳ ಮತ್ತು ಅನುಭವ ಸಿದ್ಧಿಗಾಗಿ ಈ ಕಾರ್ಯಾಗಾರವು ಸಂಘಟಿಸಲ್ಪಟ್ಟಿರುವುದರಿಂದ ಇದು ಅತ್ಯಂತ ಪ್ರಯೋಜನಕಾರಿಯಾಗಿದೆ.

ಕರ್ತವ್ಯದಲ್ಲಿ ಶ್ರದ್ಧೆ ಮತ್ತು ನಿಷ್ಠೆಗಳ ಕೊರತೆಯಾಗಬಾರದು. ಸರಕಾರಗಳು ಜನರನ್ನು ಬಲಹೀನರನ್ನಾಗಿಸುವ ಬದಲು ಬಲಿಷ್ಠರನ್ನಾಗಿಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದು ಉತ್ತಮ. ಇದೇ ಕಾರ್ಯವನ್ನು ತನ್ನ ಸಿಬ್ಬಂದಿಯವರಿಗೆ ಸಂಯುಕ್ತ ಸಹಕಾರಿಯು ಮಾಡುತ್ತಿರುವುದು ಶ್ಲಾಘನೀಯ ಎಂದರು. ಸಿಬ್ಬಂದಿಯವರು ವೃತ್ತಿ ಪ್ರೇಮ ಬೆಳೆಸಿಕೊಳ್ಳಬೇಕು ಎಂದು ಆಶೀರ್ವಚನ ನೀಡಿದರು.

## ಕಲಿ ನಲಿ ಕಾರ್ಯಕ್ರಮ – ಶ್ರೀ ಹೆಚ್.ವಿ.ರಾಜೀವ್

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಮಾತನಾಡಿದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ್‌ರವರು ವಿಶ್ವದಲ್ಲಿ ಅನೇಕ ಬದಲಾವಣೆಗಳನ್ನು ಪ್ರತಿದಿನ ನೋಡುತ್ತಿದ್ದೇವೆ. ಅದರಂತೆ, ಸಹಕಾರ ಕ್ಷೇತ್ರದಲ್ಲೂ ಸಾಕಷ್ಟು ಬದಲಾವಣೆಗಳನ್ನು ಗಮನಿಸುತ್ತಿದ್ದೇವೆ. ಪ್ರಗತಿಯ ವೇಗಕ್ಕೆ ನಾವು ಹೊಂದಿಕೊಳ್ಳುವುದು ಅನಿವಾರ್ಯ. ಅದಕ್ಕಾಗಿ ಇಂತಹ ಉತ್ತಮ ಪರಿಸರದಲ್ಲಿ, ಪ್ರಕೃತಿ ಸೌಂದರ್ಯದಲ್ಲಿ ವಾಯುವಿಹಾರ ಹಾಗೂ ಇತರೆ ವ್ಯವಸ್ಥೆಗಳೊಂದಿಗೆ ನಲಿಯುತ್ತಾ ಕಲಿಕೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಸಿಬ್ಬಂದಿಯವರು ಇದರ ಪೂರ್ಣ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಕರೆ ನೀಡಿದರು.

ಪ್ರಾರಂಭದಲ್ಲಿ ಕುಮಾರಿ ದಿವ್ಯರವರಿಂದ ಪ್ರಾರ್ಥನೆಯಾದ ನಂತರ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ವೈ.ಕುಮಾರ್‌ರವರಿಂದ ಸ್ವಾಗತ. ನಂತರದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್‌ರವರು ಪ್ರಾಸ್ತಾವಿಕ ಭಾಷಣದಲ್ಲಿ ಸಿಬ್ಬಂದಿಯವರು ಸಂಯುಕ್ತ ಸಹಕಾರಿಯ ಕಾರ್ಯ ಚಟುವಟಿಕೆಗಳ ಬಗ್ಗೆ ಪೂರ್ಣ ಮಾಹಿತಿಯನ್ನು ಹೊಂದಿ, ಕಾರ್ಯನಿರ್ವಹಿಸುವುದು ಅಗತ್ಯ, ಅದಕ್ಕಾಗಿ ಈ ತರಬೇತಿ. ಸಿಬ್ಬಂದಿಯವರಲ್ಲಿ ಶಿಸ್ತು ಮತ್ತು ದಕ್ಷತೆ ಮೂಡಿಸುವ ಬಗ್ಗೆ ವಿಶೇಷ ಮಾಹಿತಿಗಳನ್ನು ನೀಡುವುದಕ್ಕಾಗಿ ಈ ಕಾರ್ಯಕ್ರಮ ಎಂದು ತಿಳಿಸಿದರು. ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಕೃತಿ ಜನಾರ್ದನರವರು ವಂದನಾರ್ಪಣೆ ನೆರವೇರಿಸಿದರು. ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಶಶಿಧರ್, ಸಹಕಾರಿಗಳ ಉಪನಿಬಂಧಕರು, ಮೈಸೂರು ಇವರು 'ಸಮಾಪನಾಧಿಕಾರಿಯವರ ಕರ್ತವ್ಯ ಹಾಗೂ ಜವಾಬ್ದಾರಿಗಳ' ಕುರಿತು, ಸಂಯುಕ್ತ ಸಹಕಾರಿಯ ಕಾನೂನು ವಿಭಾಗದ ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀಕಾಂತರವರು 'ವಿಶೇಷಾಧಿಕಾರಿಗಳ ಕರ್ತವ್ಯ ಹಾಗೂ ಜವಾಬ್ದಾರಿಗಳ' ಬಗ್ಗೆ, ಶ್ರೀ ರಮೇಶ ಹೆಗಡೆಯವರು 'ಸಂಪನ್ಮೂಲ ನಿರ್ವಹಣೆ' ಹಾಗೂ ಶ್ರೀ ಸಿದ್ದು ಯಾಪಲಪರ್ವಿಯವರು 'ಆಂತರಿಕ ಸಂಬಂಧಗಳ ನಿರ್ವಹಣೆ ಮತ್ತು ಮಾನವೀಯ ಮೌಲ್ಯಗಳ ನಿರ್ವಹಣೆ'ಗಳ ಬಗ್ಗೆ ಉಪನ್ಯಾಸ ನೀಡಿದರು.

## ಸೌಹಾರ್ದ ಸಹಕಾರಿ ಕ್ಷೇತ್ರದ ಹಾಗೂ ಸಂಯುಕ್ತ ಸಹಕಾರಿಯ ಅಭಿವೃದ್ಧಿಗಾಗಿ ಚಿಂತನೆ ಮಾಡಿ
### – ಶ್ರೀ ಗುರುನಾಥ ಜಾಂತಿಕರ ಕಿವಿಮಾತು

ಸಿಬ್ಬಂದಿಯವರೊಂದಿಗೆ ಸುದೀರ್ಘವಾಗಿ ಚರ್ಚಿಸಿ, ತರಬೇತಿ ಶಿಬಿರದಲ್ಲಿ ಬೋಧಿಸಿದ ವಿಷಯಗಳ ಬಗ್ಗೆ ಸಿಬ್ಬಂದಿಯವರು ಗಮನಹರಿಸಬೇಕು ಎಂದು ತಿಳಿಸಿ, ಸಮಾರೋಪ ಭಾಷಣದಲ್ಲಿ ಸಿಬ್ಬಂದಿಯವರು ಸಂಯುಕ್ತ ಸಹಕಾರಿಯ ಅಸ್ತಿತ್ವ, ಬೆಳವಣಿಗೆ ಮತ್ತು ಸಹಕಾರಿ ಪರಿಸರಗಳನ್ನು ತಿಳಿದುಕೊಂಡು ಕಾರ್ಯನಿರ್ವಹಿಸಬೇಕೆಂದು ಹಾಗೂ ಸಿಬ್ಬಂದಿಯವರು ತಮ್ಮ ಕೆಲಸದಲ್ಲಿ ಹೆಚ್ಚಿನ ಆಸಕ್ತಿಯನ್ನು ಬೆಳೆಸಿಕೊಳ್ಳಬೇಕೆಂದು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಸಲಹೆ ನೀಡಿದರು.



## ಸಂಯುಕ್ತ ಸಹಕಾರಿಯ ಅಧಿಕಾರಿಗಳಿಗೆ ಕಾರ್ಯ ಪರಿಣಿತಿ ತರಬೇತಿ ಹಾಗೂ ಅಧ್ಯಯನ ಪ್ರವಾಸ :
### ಅಧಿಕಾರಿಗಳಿಗೆ ಸಹಕಾರಿ ಪರಿಸರ ಜ್ಞಾನ ಅಗತ್ಯ - ಶ್ರೀ ಗುರುನಾಥ ಜಾಂತಿಕರ



ಸಂಯುಕ್ತ ಸಹಕಾರಿಯ ಅಧಿಕಾರಿಗಳಿಗಾಗಿ ಕೇರಳ ರಾಜ್ಯದಲ್ಲಿನ ತಿರುವನಂತಪುರದಲ್ಲಿರುವ ಸಹಕಾರ ನಿರ್ವಹಣಾ ಸಂಸ್ಥೆಯಲ್ಲಿ 2 ದಿನಗಳ "ಕಾರ್ಯ ಪರಿಣಿತಿ ಹಾಗೂ ಅಧ್ಯಯನ ಪ್ರವಾಸ" ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಉದ್ಘಾಟಿಸಿ, ಸಹಕಾರಿ ಪರಿಸರ ಅಧ್ಯಯನ ಸಹಕಾರಿಗಳ ಜ್ಞಾನ ಅಭಿವೃದ್ಧಿಗೆ ಪೂರಕ, ಅದಕ್ಕಾಗಿ ಈ ತರಬೇತಿ ಎಂದು ತಿಳಿಸಿದರು. ಪ್ರಾರಂಭದಲ್ಲಿ ಐಸಿಎಂನ ನಿರ್ದೇಶಕರಾದ ಶ್ರೀ ಮೆನನ್ ರವರು ಎಲ್ಲರನ್ನು ಸ್ವಾಗತಿಸಿ, ಇದೊಂದು ಒಳ್ಳೆಯ ಕಾರ್ಯಕ್ರಮ ಹಮ್ಮಿಕೊಂಡಿರುವುದಾಗಿ ಹೇಳಿ, ಈ ಕಾರ್ಯಕ್ರಮದ ಯಶಸ್ಸಿಗೆ ಎಲ್ಲ ರೀತಿಯ ಸಹಕಾರ ನೀಡಲಾಗುವುದು ಎಂದು ತಿಳಿಸಿದರು. ಶ್ರೀ ಗುರುಪ್ರಸಾದ್‌ರವರು ವಂದಿಸಿದರು.

ಈ ತರಬೇತಿ ಅವಧಿಯಲ್ಲಿ ನಿರ್ವಹಣಾ ಸಂಸ್ಥೆಯ ಪ್ರಾಧ್ಯಾಪಕರಾದ ಶ್ರೀ ವಿ.ಎನ್.ಬಾಬುರವರು ಕೇರಳ ರಾಜ್ಯದ ವಿವಿಧ ರೀತಿಯ ಸಹಕಾರ ಸಂಘಗಳು, ಸರಕಾರದ ಪಾತ್ರ, ಸಹಕಾರಿ ಕಾಯ್ದೆ, ಸಹಕಾರಿ ಪರಿಸರ ಮತ್ತು ಸಹಕಾರ ಚಳುವಳಿಯ ಕಾರ್ಯಚಟುವಟಿಕೆಗಳ ಬಗ್ಗೆ ವಿವರಗಳನ್ನು ತಿಳಿಸಿದರು. ನಂತರ ಡಾ. ಜಯಲಕ್ಷ್ಮಿಯವರು ಆಡಳಿತ ಪರಿಣಿತಿಯ ಹಂತಗಳು ಮತ್ತು ಅವುಗಳನ್ನು ರೂಢಿಸಿಕೊಳ್ಳುವ ವಿಧಾನಗಳ ಬಗ್ಗೆ ಉಪನ್ಯಾಸ ನೀಡಿದರು.

ಕಾರ್ಯಕ್ರಮದ ಅಂಗವಾಗಿ ಸಹಕಾರ ನಿರ್ವಹಣಾ ಸಂಸ್ಥೆಯವರು ತಮ್ಮ ಸಂಸ್ಥೆಯ ಕಾರ್ಯಚಟುವಟಿಕೆಗಳ ಮಾಹಿತಿ ನೀಡುವುದರ ಜೊತೆಗೆ ತ್ರಿವೇಂಡ್ರಮ್ ಹೊರವಲಯದಲ್ಲಿರುವ ಮಾರಮುಟ್ಟಮ್ ಸರ್ವಿಸ್ ಕೋ–ಆಪರೇಟಿವ್ ಬ್ಯಾಂಕ್ ಮತ್ತು ಪೆರೂರಕಡ ಸರ್ವಿಸ್ ಕೋ–ಆಪರೇಟಿವ್ ಬ್ಯಾಂಕುಗಳ ಅಧ್ಯಯನ ಕಾರ್ಯಕ್ರಮ ಏರ್ಪಡಿಸಿದ್ದರು.

ಮೈಸೂರು ವಿಶ್ವವಿದ್ಯಾಲಯದ ಶತಮಾನೋತ್ಸವ ಕಾರ್ಯಕ್ರಮಗಳ ಅಂಗವಾಗಿ "ಸರಣಿ ಉಪನ್ಯಾಸ" ಮಾಲಿಕೆ

## ನೊಬೆಲ್ ಪ್ರಶಸ್ತಿ ಪುರಸ್ಕೃತ ಶ್ರೀ ಮೊಹಮ್ಮದ್ ಯುನಸ್‌ರವರ

# "ವಿಶ್ವ ಪುನರ್ ನಿರ್ಮಾಣಕ್ಕಾಗಿ ಅರ್ಥಶಾಸ್ತ್ರ ಮರುವಿನ್ಯಾಸ" ಉಪನ್ಯಾಸಕ್ಕೆ ಪ್ರಥಮ ಗೌರವ

"ವಿಶ್ವ ಪುನರ್ ನಿರ್ಮಾಣಕ್ಕಾಗಿ ಅರ್ಥಶಾಸ್ತ್ರ ಮರುವಿನ್ಯಾಸ" ಎಂಬ ವಿಷಯದ ಮೇಲೆ ಶ್ರೀ ಮೊಹಮ್ಮದ್ ಯುನಸ್‌ರವರು 70 ನಿಮಿಷಗಳು ನೀಡಿದ ಉಪನ್ಯಾಸದಲ್ಲಿ ವಿಶ್ವದ ಆರ್ಥಿಕ ಅಭಿವೃದ್ಧಿಯ ದೃಷ್ಟಿಯಿಂದ ಸರಕಾರಗಳು, ಸಂಘ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು, ಆರ್ಥಿಕ ತಜ್ಞರು, ಬ್ಯಾಂಕಿಂಗ್ ಕ್ಷೇತ್ರದ ತಜ್ಞರು, ಸಮಾಜ ಸುಧಾರಕರು ಪರಿಗಣಿಸಲೇಬೇಕಾದ ಹಾಗೂ ಅತ್ಯಂತ ಗಂಭೀರ ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು.

ಸಮಾಜದ ಅಭಿವೃದ್ಧಿಯ ಸೂತ್ರಧಾರರಾಗಿರುವ ಈ ಮೇಲಿನ ಎಲ್ಲಾ ವರ್ಗದ ಜನರು ತಮ್ಮ ಎಲ್ಲ ಒಣಪ್ರತಿಷ್ಠೆಗಳಿಂದ ಮೆರೆಯುತ್ತಿರುವವರು, ಕೇವಲ ವೇದಿಕೆಯ ವಿಷಯವನ್ನಾಗಿಸುವ ಭಾಷಣಕಾರರು, ಒಳ್ಳೆಯದಕ್ಕೆ ತಾವು, ಕೆಟ್ಟದ್ದಕ್ಕೆ ಬೇರೆಯವರನ್ನು ಆಕ್ಷೇಪಿಸುವ ಪ್ರವೃತ್ತಿಯವರು, ಕೇವಲ ಕಾನೂನು ವ್ಯಾಪ್ತಿಯಲ್ಲಿಯೇ ಎಲ್ಲವೂ ನಡೆಯಬೇಕು ಎಂಬ ಮನೋಭಾವದವರು, ಎಲ್ಲಕ್ಕಿಂತಲೂ ಮಿಗಿಲಾಗಿ ತಮ್ಮ ವಿಚಾರಗಳಿಗೆ ಅಂಟಿಕೊಂಡು ಬೇರೆಯವರ ವಿಚಾರಗಳಿಗೆ ಮಹತ್ವ ಕೊಡದೇ ಇರುವ ಜನರಿಗೆ ತಮ್ಮ ಆತ್ಮಾವಲೋಕನಕ್ಕೆ ಶ್ರೀ ಮೊಹಮ್ಮದ್ ಯುನಸ್‌ರವರ ಕರೆ ಇದಾಗಿತ್ತು ಎಂದರೆ ಅತಿಶಯೋಕ್ತಿಯಲ್ಲ. ಮಾನವನ ಮಾನಸಿಕ ಬದಲಾವಣೆಗೆ ಸಾಮಾಜಿಕ ನೈಜ ಕಾಳಜಿಯನ್ನು ಬಡಿದೆಬ್ಬಿಸುವ ಭಾಷಣ ಅವರದ್ದಾಗಿತ್ತು.

ಶ್ರೀ ಯುನಸ್ ಒಂದು ವಿಶ್ವವಿದ್ಯಾಲಯದ ಒಬ್ಬ ಸಾಮಾನ್ಯ ಅಧ್ಯಾಪಕ, 1971ರಲ್ಲಿ ಬಾಂಗ್ಲಾ-ಪಾಕಿಸ್ತಾನ ಯುದ್ಧದ ನಂತರ ಬಾಂಗ್ಲಾ ದೇಶ ಸ್ಥಾಪನೆ, ನಂತರ ಬಾಂಗ್ಲಾ ದೇಶದ ಗ್ರಾಮೀಣ ಜನರ ಕಷ್ಟಕಾರ್ಪಣ್ಯಗಳನ್ನು ನೋಡಿ, ತಮ್ಮ ವೃತ್ತಿಗೆ ರಾಜೀನಾಮೆ ನೀಡಿ, ಹಳ್ಳಿಗಳಲ್ಲಿ ವಾಸ್ತವ್ಯ ಮಾಡಿ, ಅವರು ತಮ್ಮ ಜೀವನ ಶೈಲಿಯನ್ನೇ ಬದಲಾಯಿಸಿಕೊಳ್ಳಲು ಕಾರಣವಾದ ಕೆಲವು ದೃಷ್ಟಾಂತಗಳನ್ನು ತಿಳಿಸುತ್ತಾ ಬಾಂಗ್ಲಾ ದೇಶದ ಗ್ರಾಮೀಣ ಜನರ ಜೀವನ ಮಟ್ಟ ಸುಧಾರಿಸಲು, ಆರ್ಥಿಕವಾಗಿ ಅಭಿವೃದ್ಧಿ ಹೊಂದಲು, ತಾವು ತೆಗೆದುಕೊಂಡ ಅವಶ್ಯಕವಾದ ಕ್ರಮಗಳನ್ನು ಎಳೆ ಎಳೆಯಾಗಿ ಬಿಡಿಸುತ್ತಾ, ತಾವು ಹೆಜ್ಜೆ ಹೆಜ್ಜೆಗೂ ಅನುಭವಿಸಿದ ತೊಂದರೆಗಳನ್ನು ಎದುರಿಸಿ, ಹೇಗೆ ಯಶಸ್ವಿಯಾದರು ಎಂಬುದನ್ನು ತಿಳಿಸುವುದರ ಜೊತೆಗೆ ಒಬ್ಬ ವ್ಯಕ್ತಿ ಮನಸ್ಸು ಮಾಡಿದರೆ ಏನನ್ನು ಬೇಕಾದರೂ ಸಾಧಿಸಬಹುದು ಎಂಬುದಕ್ಕೆ ಜ್ವಲಂತ ಉದಾಹರಣೆಯಾಗಿದ್ದಾರೆ. ಅದಕ್ಕೆ ಅವರಿಗೆ 2006ರಲ್ಲಿ ನೊಬೆಲ್ ಪಾರಿತೋಷಕ ಮತ್ತು ಗ್ರಾಮೀಣ ಬಾಂಗ್ಲಾ ಜನಕ ಎಂದು ನಾಮಕರಣ. ಅವರು ಅದಕ್ಕೆ ಅರ್ಹರು ಎಂಬುದಕ್ಕೆ ಎರಡು ಮಾತಿಲ್ಲ.

ಬಾಂಗ್ಲಾ ದೇಶದ ಗ್ರಾಮೀಣ ಜನರಿಗೆ ಸಾಹುಕಾರರ ಕಪಿ ಮುಷ್ಠಿಯಿಂದ, ಮಿತಿಮೀರಿದ ಬಡ್ಡಿಯಿಂದಾಗುತ್ತಿದ್ದ ತೊಂದರೆಗಳ ನಿವಾರಣೆಗೆ ಹೋರಾಟ. ಅದಕ್ಕಾಗಿ ಪ್ರಥಮ ಹಂತವಾಗಿ ಸ್ವಸಹಾಯ ಗುಂಪುಗಳ ರಚನೆಗೆ ಮುಂದಾದರು. ನಂತರ ಯುವಶಕ್ತಿಗೆ



ಅನುಕೂಲವಾಗುವ ನಿಟ್ಟಿನಲ್ಲಿ ನಿರುದ್ಯೋಗ ನಿವಾರಣೆಯ ದೃಷ್ಟಿಯಿಂದ ಯುವಕರಲ್ಲಿ ಉದ್ಯೋಗ ಅರಸಿಕೊಂಡು ಹೋಗುವುದರ ಬದಲಿಗೆ ಉದ್ಯೋಗವನ್ನು ತಾವೇ ಸೃಷ್ಟಿಸಿಕೊಳ್ಳುವ (ಸ್ವ-ಉದ್ಯೋಗ) ಪ್ರವೃತ್ತಿಯನ್ನು ಬೆಳೆಸುವಲ್ಲಿ ಯಶಸ್ವಿಯಾಗಿ, ಅನೇಕ ಸಣ್ಣ ಸಣ್ಣ ಉದ್ದಿಮೆಗಳ ಪ್ರಾರಂಭಕ್ಕೆ ಕಾರಣರಾದರು.

ಇದರ ಜೊತೆಗೆ ಅನೇಕ ದೊಡ್ಡ ಉದ್ದಿಮೆಗಳನ್ನು ಸ್ಥಾಪಿಸುವ ಬಗ್ಗೆ ಚಿಂತನೆ ನಡೆಸಿ, ಬಂಡವಾಳದಾರರನ್ನು ಹುರಿದುಂಬಿಸಿದರು. ತರಕಾರಿ ಬೆಳೆಸುವುದು, ಸಂಸ್ಕರಿಸುವುದು, ವಿತರಣೆ, ಹಾಲು ಸಂಗ್ರಹ, ಸಂಸ್ಕರಣೆ, ಮಾರಾಟ ಮುಂತಾದವುಗಳ ನಿರ್ವಹಣೆಯ ಬಗ್ಗೆ ಶಿಕ್ಷಣ, ತರಬೇತಿ ವ್ಯವಸ್ಥೆಗಳನ್ನು ಮಾಡಿಸಿದರು.

ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆಯನ್ನು ತರುವ ಅನೇಕ ಯೋಜನೆಗಳನ್ನು ಜಾರಿ ಮಾಡಿದರು. ಸಾಮಾನ್ಯ ಜನರಿಗೆ ಶಿಕ್ಷಣದ ಮಹತ್ವವನ್ನು, ಯಾರೊಬ್ಬರು ಪ್ರಾಥಮಿಕ ಶಿಕ್ಷಣ ಕ್ಷೇತ್ರದಿಂದ ವಂಚಿತರಾಗದಂತೆ ಜನರಲ್ಲಿ ಜಾಗೃತಿ ಮೂಡಿಸಿದರು. ಶಿಕ್ಷಣ ಎಲ್ಲರಿಗೂ ತಲುಪುವಂತೆ ಮಾಡುವಲ್ಲಿ ಯಶಸ್ವಿಯಾದರು. ಸಾಮಾನ್ಯ ಜನರಿಗೆ ಆರೋಗ್ಯದ ಸೌಲಭ್ಯಗಳನ್ನು ಮುಟ್ಟಿಸುವ ನಿಟ್ಟಿನಲ್ಲಿ ಕ್ರಮಗಳನ್ನು ತೆಗೆದುಕೊಂಡರು. ಇವೆಲ್ಲ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಪ್ರಾಮಾಣಿಕತೆಯಿಂದ ಜರುಗಿಸುವುದೇ "ವಿಶ್ವ ಪುನರ್ ನಿರ್ಮಾಣ" ಅದಕ್ಕಾಗಿ ಹಮ್ಮಿಕೊಳ್ಳುವ ಕಾರ್ಯಕ್ರಮಗಳನ್ನು ಒಳಗೊಳ್ಳುವುದು ಈ "ಅರ್ಥಶಾಸ್ತ್ರ" ಎಂದು ಕರೆ ನೀಡಿದರು. ಡಾ. ಯುನಸ್‌ರವರ ಉಪನ್ಯಾಸ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸಾವಿರಾರು ಜನರ ಮೆಚ್ಚುಗೆಗೆ ಪಾತ್ರವಾಗುವುದರ ಜೊತೆಗೆ ಮಾನಸಿಕತೆಯನ್ನು ಬದಲಾಯಿಸುವ ನಿಟ್ಟಿನಲ್ಲಿ ಸ್ಫೂರ್ತಿದಾಯಕವಾಗಿತ್ತು. ■

# ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ ಉಪಾಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳ ಸಂಪರ್ಕ ಸಭೆ

**ಕಲಬುರ್ಗಿ ವಿಭಾಗ :** ದಿನಾಂಕ 09.09.2015 ರಂದು ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ ಉಪಾಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳ "ಸಂಪರ್ಕ ಸಭೆ"ಯನ್ನು ಆಯೋಜಿಸಲಾಗಿತ್ತು. ಸಭೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಉದ್ಘಾಟಿಸಿದರು ಮತ್ತು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಕೆ. ಸಣ್ಣಸೂಗಪ್ಪ ಹಾಗೂ ಸಂಯುಕ್ತ ಸಹಕಾರಿಯ ಕಲಬುರ್ಗಿ ವಿಭಾಗೀಯ ಅಧಿಕಾರಿ ಶ್ರೀ ಸಂಜಯ ಕೋರಟಕರವರು ಉಪಸ್ಥಿತರಿದ್ದರು.

ಸಂಪರ್ಕ ಸಭೆಯಲ್ಲಿ ಶ್ರೀ ಗುರುನಾಥ ಜಾಂತಿಕರರವರು ಸಂಯುಕ್ತ ಸಹಕಾರಿಯ 14ನೇ ಸಾಮಾನ್ಯ ಸಭೆಯಲ್ಲಿ ಹೊರತರಲಾದ ಸಹಕಾರಿ ತೀರ್ಪುಗಳು, ಸಾರಾಂಶ ಹಾಗೂ ಸೌಹಾರ್ದ ಸಹಕಾರಿಗಳಿಗೆ ಅನ್ವಯಿಸುವ ವಿವಿಧ ತೆರಿಗೆ ಕಾಯ್ದೆಗಳ ಪುಸ್ತಕಗಳ ಕುರಿತು ಮಾಹಿತಿ ನೀಡಿ, ಅವುಗಳ ಪ್ರಯೋಜನವನ್ನು ಪಡೆಯಲು ತಿಳಿಸಿದರು. ನಂತರ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ ಉಪಾಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಂದ ಸಹಕಾರಿಗಳ ಬೆಳವಣಿಗೆ ಮತ್ತು ಸಹಕಾರಿಗಳಲ್ಲಿನ ತೊಂದರೆಗಳ ಬಗ್ಗೆ ಮಾಹಿತಿ ಪಡೆದರು. ಇತ್ತೀಚಿನ ಸೌಹಾರ್ದ ಸಹಕಾರಿ ಅಧಿನಿಯಮದ ತಿದ್ದುಪಡಿಗಳ ಕುರಿತು ಸಹಕಾರಿಗಳಿಗೆ ಮಾಹಿತಿ ನೀಡಿದರು.



ಸಹಕಾರಿಯ ಸದಸ್ಯರು ಸಕ್ರಿಯ ಪಾಲ್ಗೊಳ್ಳುವಿಕೆಯಿಂದ ಸಂಸ್ಥೆಯು ಆರೋಗ್ಯ ಪೂರ್ಣವಾಗಿ ಬೆಳೆಯುತ್ತಿವೆ. ಸಹಕಾರಿಗಳಿಗೆ ಆದಾಯ ತೆರಿಗೆ ವಿನಾಯಿತಿ ನೀಡಬೇಕೆಂದು ಕೇಂದ್ರ ವಿತ್ತ ಸಚಿವರಾದ ಶ್ರೀ ಅರುಣ್ ಜೇಟ್ಲಿ ಇವರನ್ನು ಭೇಟಿಯಾಗಿ ವಿನಂತಿಸಿಕೊಂಡಿದ್ದು, ಅವರು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿರುವುದಾಗಿ ತಿಳಿಸಿದರು. ಇತ್ತೀಚಿನ ದಿನಗಳಲ್ಲಿ ಸಹಕಾರಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪ್ರಗತಿ ಹಾಗೂ ಸಮಸ್ಯೆಗಳ ಕುರಿತು ಚರ್ಚಿಸಲಾಯಿತು. ಸಂಯುಕ್ತ ಸಹಕಾರಿಯ ಕೆಲಸ ಕಾರ್ಯಗಳ ಬಗ್ಗೆ ಸಹಕಾರಿಗಳಿಗೆ ವಿವರಿಸಿದರು. ಈ ಸಭೆಯಲ್ಲಿ ಕೊಪ್ಪಳ ಜಿಲ್ಲೆಯ 59 ಸೌಹಾರ್ದ ಸಹಕಾರಿಗಳಿಂದ 103 ಪ್ರತಿನಿಧಿಗಳು ಭಾಗವಹಿಸಿದ್ದರು. ಸಭೆಯ ನಿರೂಪಣೆಯನ್ನು ಶ್ರೀ ಸಂಜಯ ಕೋರಟಕರ ಹಾಗೂ ವಂದನಾರ್ಪಣೆಯನ್ನು ಶ್ರೀ ವಿಜಯ ಬಿ.ಎಸ್ (ಎಸ್.ಡಿ.ಓ) ಇವರು ನೆರವೇರಿಸಿದರು.

## ಸಂಯುಕ್ತ ಸಹಕಾರಿಯ ಬೆಳಗಾವಿ ವಿಭಾಗೀಯ ಕಛೇರಿಗೆ ಸಹಕಾರ ಮಹಾಮಂಡಳದ ಅಧ್ಯಕ್ಷರ ಭೇಟಿ



ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಶೇಖರ ಗೌಡ ಮಾಲಿ ಪಾಟೀಲ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಕೆ.ಎ. ವೆಂಕಟೇಶ ರವರು ಭೇಟಿ ನೀಡಿ, ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳನ್ನು ತಿಳಿದುಕೊಂಡು, ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಶಿಕ್ಷಣನಿಧಿ ಸಲಹಾ ಸಮಿತಿಯ ಸದಸ್ಯರಾದ ಶ್ರೀ ಬಿ.ಎಸ್. ಸುಲ್ತಾನಪುರಿ, ಬೆಳಗಾವಿ ಜಿಲ್ಲೆ ಸಹಕಾರ ಯೂನಿಯನಿನ ಅಧ್ಯಕ್ಷರು, ಸಹಕಾರ ತರಬೇತಿ ಕೇಂದ್ರದ ಪ್ರಾಂಶುಪಾಲರು ಹಾಗೂ ಅಧ್ಯಾಪಕ ವರ್ಗ, ಸಂಯುಕ್ತ ಸಹಕಾರಿಯ ಬೆಳಗಾವಿ ವಿಭಾಗದ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಸೌಹಾರ್ದ ಸಹಕಾರಿಗಳಿಗೆ ಹಾಗೂ ಸಹಕಾರ ಸಂಘಗಳಿಗೆ ಆದಾಯ ತೆರಿಗೆಯಿಂದ ವಿನಾಯಿತಿ – ಧಾರವಾಡ ಹೈಕೋರ್ಟ್‌ನಿಂದ ಮಹತ್ವದ ತೀರ್ಪು

ಸೌಹಾರ್ದ ಸಹಕಾರ ಸಂಸ್ಥೆಗಳು ಹಾಗೂ ಸಹಕಾರ ಸಂಘಗಳಿಗೆ ತೆರಿಗೆ ಕಾಯ್ದೆ 1961 ಕಲಂ 80ಪಿ ರಡಿ ಆದಾಯ ತೆರಿಗೆ ವಿನಾಯಿತಿ ಇದೆ. ಆದ್ದರಿಂದ, ಅವುಗಳ ಆದಾಯಕ್ಕೆ ತೆರಿಗೆ ವಿನಾಯಿತಿ ನೀಡುವಂತೆ ಧಾರವಾಡ ಹೈಕೋರ್ಟ್ ಪೀಠ ಆದಾಯ ತೆರಿಗೆ ಇಲಾಖೆಗೆ ಸೂಚಿಸಿದೆ.

ಸಹಕಾರ ಸಂಘಗಳು ಹಾಗೂ ಸೌಹಾರ್ದ ಸಹಕಾರಿಗಳು ತೆರಿಗೆ ಪಾವತಿಸುವಂತೆ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ನಿರಂತರವಾಗಿ ನೀಡುತ್ತಿದ್ದ ನೋಟೀಸ್‌ಗೆ ಸಂಬಂಧಿಸಿದಂತೆ ಬೆಳಗಾವಿ ಜಿಲ್ಲೆಯ 50ಕ್ಕೂ ಹೆಚ್ಚು ಸಹಕಾರ ಸಂಘಗಳು ಹಾಗೂ ಸೌಹಾರ್ದ ಸಹಕಾರಿಗಳು ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಆನಂದ ಬೈರಾರೆಡ್ಡಿ ಮತ್ತು ನ್ಯಾಯಮೂರ್ತಿ ಎಸ್ ಸುಜಾತಾ ಅವರಿದ್ದ ವಿಭಾಗೀಯ ಪೀಠ, ಯಾವುದೇ ಸಹಕಾರ ಸಂಘಗಳು ಹಾಗೂ ಸೌಹಾರ್ದ ಸಹಕಾರಿಗಳ ಆರ್ಥಿಕ ವ್ಯವಹಾರಗಳ ಆದಾಯ ಪರಿಶೀಲಿಸಿ ಅವುಗಳು ಬ್ಯಾಂಕ್ ಎಂದು ನಿರ್ಧರಿಸುವ ಅಧಿಕಾರ ತೆರಿಗೆ ಆಯುಕ್ತರಿಗೆ ಇರುವುದಿಲ್ಲ ಎಂದು ಅಭಿಪ್ರಾಯಪಟ್ಟಿತು.

ಬೆಳಗಾವಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಹಾಗೂ ಸಹಕಾರ ಸಂಘಗಳಿಗೆ ತೆರಿಗೆ ಪಾವತಿಸುವಂತೆ 2010 ರಿಂದ ಹಂತ ಹಂತವಾಗಿ ತೆರಿಗೆ ಆಯುಕ್ತರು ಆದೇಶ ಮಾಡುತ್ತಾ ಬಂದಿದ್ದರು. ಆಯುಕ್ತರ ಕ್ರಮ ಪ್ರಶ್ನಿಸಿ ಸಹಕಾರ ಸಂಸ್ಥೆಗಳು ಗೋವಾದ ಪಣಜಿಯಲ್ಲಿನ ತೆರಿಗೆ ಮೇಲ್ಮನವಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿದ್ದವು.

ವಿಚಾರಣೆ ಮಾಡಿದ್ದ ಪ್ರಾಧಿಕಾರ 2014ರಲ್ಲಿ ಸಹಕಾರ ಸಂಸ್ಥೆಗಳ ಅರ್ಜಿಯನ್ನು ತಿರಸ್ಕರಿಸಿತ್ತು. ಆದ್ದರಿಂದ, ಪ್ರಾಧಿಕಾರದ ಕ್ರಮ ಮತ್ತು ತೆರಿಗೆ ಆಯುಕ್ತರ ಆದೇಶ ಪ್ರಶ್ನಿಸಿ ಸಹಕಾರ ಸಂಸ್ಥೆಗಳು ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದವು. ಹೈಕೋರ್ಟ್ ತೀರ್ಪಿನಿಂದ ಆದಾಯ ತೆರಿಗೆ ಇಲಾಖೆ ಆಯುಕ್ತರ ಆದೇಶ ರದ್ದಾದಂತಾಗಿದೆ. ಧಾರವಾಡ ಹೈಕೋರ್ಟ್‌ನ ಈ ಮಹತ್ವದ ತೀರ್ಪಿನಿಂದಾಗಿ ಆದಾಯ ತೆರಿಗೆ ಪಾವತಿಗೆ ಸಂಬಂಧಿಸಿದಂತೆ ಸೌಹಾರ್ದ ಸಹಕಾರಿಗಳು ಎದುರಿಸುತ್ತಿದ್ದ ತೊಂದರೆಗಳಿಗೆ ಪರಿಹಾರ ದೊರೆತಂತಾಗಿದೆ.

## ಶ್ರೀ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಹುಣಸಮಾರನಹಳ್ಳಿ ಸಹಕಾರಿಯ 5ನೇ ವಾರ್ಷಿಕ ಮಹಾಸಭೆ



ಶ್ರೀ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿಯ 2014–15ನೇ ಸಾಲಿನ 5ನೇ ವಾರ್ಷಿಕ ಮಹಾಸಭೆಯು ದಿನಾಂಕ 09.08.2015ರಂದು ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ, ಹುಣಸಮಾರನಹಳ್ಳಿಯಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಆರ್.ಬೈರೇಗೌಡರವರ ಅಧ್ಯಕ್ಷತೆಯಲ್ಲಿ ನಡೆಯಿತು.

ರಾಷ್ಟ್ರಪ್ರಶಸ್ತಿ ವಿಜೇತ ಹಾಗೂ ಹುಣಸಮಾರನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಮುಖ್ಯೋಪಾಧ್ಯಾಯರಾದ ಶ್ರೀ ಭದ್ರಯ್ಯ, ದೈಹಿಕ ನ್ಯೂನತೆಯಿದ್ದರೂ ಮಾನಸಿಕ ಸ್ಥೈರ್ಯದ ಮೂಲಕ ಇಡೀ ಕೃಷಿ ಕ್ಷೇತ್ರದಲ್ಲಿ ಹೊಸ ಹೆಜ್ಜೆ ಗುರುತುಗಳನ್ನು ಮೂಡಿಸಿರುವ ತುಮಕೂರು ಜಿಲ್ಲೆಯ ಶೀನಪ್ಪನಹಳ್ಳಿಯ ರೈತ ಶ್ರೀ ಹೆಚ್.ಜಿ.ನಂಜುಂಡಯ್ಯ, ಪ್ರಾಮಾಣಿಕ ಪೋಲೀಸ್ ಅಧಿಕಾರಿ ಶ್ರೀ ಎಲ್.ವೈ.ರಾಜೇಶ್ ಇವರುಗಳನ್ನು ಸಹಕಾರಿಯ ವತಿಯಿಂದ ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ಉಚಿತ ರಕ್ತದಾನ ಶಿಬಿರ, ವನಸಿರಿ ಕಾರ್ಯಕ್ರಮದ ನಿಮಿತ್ತ ಉಚಿತ ಬೇವಿನ ಸಸಿಗಳ ವಿತರಣೆ ಮತ್ತು ಸಹಕಾರಿ ಸದಸ್ಯರುಗಳ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಕೂಡ ಏರ್ಪಡಿಸಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಪಾಟೀಲ, ಲೆಕ್ಕಪರಿಶೋಧಕರಾದ ಶ್ರೀ ಮಧುಕರ ಹೆಗಡೆ, ಸಿಫಿನ್ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಎನ್.ಶಿವಕುಮಾರ್, ಹುಣಸಮಾರನಹಳ್ಳಿ ಗ್ರಾಮಪಂಚಾಯ್ತಿ ಅಧ್ಯಕ್ಷರಾದ ಶ್ರೀ ಹೆಚ್.ಬಿ.ಹರೀಶ್ ಕುಮಾರ್, ಸಹಕಾರಿಯ ಗೌರವ ಕಾರ್ಯದರ್ಶಿಯಾದ ಶ್ರೀ ಬಿ.ಪುಟ್ಟಶಾಮಪ್ಪ, ಉಪಾಧ್ಯಕ್ಷರಾದ ಶ್ರೀ ವೀರೇಶ್ ಮತ್ತು ನಿರ್ದೇಶಕರು ಉಪಸ್ಥಿತರಿದ್ದರು.

## ಸೌಹಾರ್ದ ಸಹಕಾರಿಗಳ ಅಧ್ಯಯನ ಪ್ರವಾಸ

ರಾಜ್ಯದ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ ಪದಾಧಿಕಾರಿಗಳು/ ಸಿಬ್ಬಂದಿಯವರಿಗಾಗಿ ದಿನಾಂಕ 02.10.2015 ರಿಂದ ದಿನಾಂಕ : 08.10.2015 ರವರೆಗೆ ಏರ್ಪಡಿಸಿದ್ದ ಕರ್ನಾಟಕ, ಗೋವಾ, ಮಹಾರಾಷ್ಟ್ರ ರಾಜ್ಯಗಳ ಅಧ್ಯಯನ ಪ್ರವಾಸ ಹಾಗೂ ಕರ್ನಾಟಕ, ಕೇರಳ ಹಾಗೂ ತಮಿಳುನಾಡು ರಾಜ್ಯಗಳ ಅಧ್ಯಯನ ಪ್ರವಾಸದ 2 ತಂಡಗಳಿಗೆ ಪೂರ್ಣ ಪ್ರಮಾಣದಲ್ಲಿ ಪ್ರತಿನಿಧಿಗಳ ನೋಂದಣಿಯಾಗದೇ ಇರುವುದರಿಂದ ಸದರಿ ಪ್ರವಾಸವನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ. ಪ್ರತಿನಿಧಿಗಳು ಪೂರ್ಣ ಪ್ರಮಾಣದಲ್ಲಿ ನೋಂದಣಿಯಾದ ನಂತರ ಪ್ರವಾಸದ ವಿವರಗಳನ್ನು ತಿಳಿಸಲಾಗುವುದು.

ಕರ್ನಾಟಕ, ಗೋವಾ, ಮಹಾರಾಷ್ಟ್ರ ರಾಜ್ಯಗಳ ಅಧ್ಯಯನ ಪ್ರವಾಸ ಹಾಗೂ ಕರ್ನಾಟಕ, ಕೇರಳ ಹಾಗೂ ತಮಿಳುನಾಡು ರಾಜ್ಯಗಳ ಅಧ್ಯಯನ ಪ್ರವಾಸಕ್ಕೆ ತಲಾ ರೂ.13,000/– ಶುಲ್ಕವಿದ್ದು, ಎರಡೂ ತಂಡಗಳಲ್ಲಿ ಕೇವಲ 30 ಜನರಿಗೆ ಮಾತ್ರ ಅವಕಾಶವಿದೆ. ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಬಹುದಾಗಿದೆ.

## ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 10 ದಿನಗಳ ವ್ಯಕ್ತಿತ್ವ ವಿಕಸನದ 14ನೇ ತಂಡದ ತರಬೇತಿ ಕಾರ್ಯಕ್ರಮ

ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ಸಂಯುಕ್ತ ಸಹಕಾರಿಯು ಕಳೆದ 7 ವರ್ಷಗಳಿಂದ ಪ್ರತಿ 6 ತಿಂಗಳಿಗೊಮ್ಮೆ ಏರ್ಪಡಿಸುತ್ತಿರುವ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮದ 14ನೇ ತಂಡವನ್ನು ಡಿಸೆಂಬರ್ ಮಾಹೆಯಲ್ಲಿ ರಾಯಚೂರು ಜಿಲ್ಲೆಯಲ್ಲಿ ಆಯೋಜಿಸಲು ಉದ್ದೇಶಿಸಿದೆ. ಸೌಹಾರ್ದ ಸಹಕಾರಿಗಳು ತಮ್ಮ ಸಂಸ್ಥೆಯ ಸಿಬ್ಬಂದಿಯವರನ್ನು ಕಳುಹಿಸಿಕೊಡಲು ಕೋರಿದೆ.

ಮಹಿಳೆಯರಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ಇರುತ್ತದೆ. ಪ್ರತಿನಿಧಿ ಶುಲ್ಕ ತಲಾ ರೂ. 5,000/– ಕಾರ್ಯಕ್ರಮಕ್ಕೆ ಬಂದು ಹೋಗುವ ಪ್ರಯಾಣ ವೆಚ್ಚವನ್ನು ಸಂಬಂಧಿಸಿದ ಸೌಹಾರ್ದ ಸಹಕಾರಿಗಳಿಂದ ಭರಿಸಬೇಕು. ನೋಂದಣಿಯ ಕೊನೆಯ ದಿನಾಂಕ : 10.11.2015.

**ಕಾರ್ಯಕ್ರಮದ ವಿವರ :** ತರಬೇತಿಯ ಅವಧಿಯಲ್ಲಿ ಸಹಕಾರ ಕ್ಷೇತ್ರ, ಸೌಹಾರ್ದ ಸಹಕಾರಿ ಕ್ಷೇತ್ರ ಹಾಗೂ ಬ್ಯಾಂಕಿಂಗ್ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯಗಳು, ಕಛೇರಿ ಆಡಳಿತ ನಿರ್ವಹಣೆ, ಲೆಕ್ಕಪತ್ರಗಳ ನಿರ್ವಹಣೆ, ಹಣಕಾಸಿನ ನಿರ್ವಹಣೆ, ಸಾಲಪತ್ರಗಳ ನಿರ್ವಹಣೆ, ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ವಿಷಯಗಳು, ಆಂತರಿಕ ಸಂಬಂಧ ಹಾಗೂ ಗ್ರಾಹಕರ ಸೇವೆಗಳ ನಿರ್ವಹಣೆ, ಮಾನವೀಯ ಮೌಲ್ಯಗಳು ಮುಂತಾದ ವಿಷಯಗಳ ಬಗ್ಗೆ ತಿಳಿಸಿಕೊಡಲಾಗುವುದು.

ಆರ್ಥಿಕ ತಃಖ್ತೆಗಳ ಸಿದ್ಧತೆ, ಸಭೆಯ ನೋಟೀಸ್, ಟಿಪ್ಪಣಿ ಹಾಗೂ ನಡವಳಿಗಳನ್ನು ಬರೆಯುವ ಬಗ್ಗೆ ಪ್ರಾಯೋಗಿಕ ನಡೆಸಿಕೊಡಲಾಗುತ್ತದೆ. ಅತ್ಯುತ್ತಮ ಸಹಕಾರ ಸಂಸ್ಥೆಗಳಿಗೆ ಅಧ್ಯಯನ ಪ್ರವಾಸ ಹಾಗೂ ಪ್ರೇಕ್ಷಣೀಯ ಸ್ಥಳಗಳ ಭೇಟಿಯನ್ನು ಆಯೋಜಿಸಲಾಗುತ್ತದೆ. ಬೆಳಿಗ್ಗೆ ಯೋಗಾಭ್ಯಾಸ, ಸಂಜೆ ಅನೌಪಚಾರಿಕ ಸಭೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಆರೋಗ್ಯ ತಪಾಸಣೆಯನ್ನು ನಡೆಸಲಾಗುತ್ತದೆ.

## ಸೌಹಾರ್ದ ಸಹಕಾರಿಗಳಿಗಾಗಿ ಸಹಕಾರ ಸಮಾವೇಶ

ದಿನಾಂಕ 17 ಅಕ್ಟೋಬರ್ 2015ರಂದು "ದಿ ಕೆನರಾ ಯೂನಿಯನ್, ಮಲ್ಲೇಶ್ವರಂ, ಬೆಂಗಳೂರು" ಇಲ್ಲಿ ಸೌಹಾರ್ದ ಸಹಕಾರಿಗಳಿಗಾಗಿ ಸಹಕಾರ ಸಮಾವೇಶವನ್ನು ಆಯೋಜಿಸಲಾಗಿದೆ. ಈ ಸಮಾವೇಶದ ಉದ್ಘಾಟನೆಯನ್ನು ಮಾನ್ಯ ಸಹಕಾರ ಸಚಿವರಾದ ಶ್ರೀ ಹೆಚ್. ಎಸ್.ಮಹದೇವಪ್ರಸಾದ್‌ರವರು ನೆರವೇರಿಸಲಿದ್ದಾರೆ.ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯದ ಮಾನ್ಯ ಶಾಸಕರು, ಲೋಕಸಭಾ ಸದಸ್ಯರು, ಸಹಕಾರ ಕ್ಷೇತ್ರದ ಗಣ್ಯರು ಹಾಗೂ ಸಹಕಾರ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿರುತ್ತಾರೆ. ಈ ಸಮಾವೇಶದಲ್ಲಿ ತಾವುಗಳು ಭಾಗವಹಿಸಿ, ಸಮಾವೇಶವನ್ನು ಯಶಸ್ವಿಯಾಗಿಸುವ ಮೂಲಕ ಸೌಹಾರ್ದ ಸಹಕಾರಿ ಚಳುವಳಿಗೆ ಉತ್ತೇಜನ ನೀಡಬೇಕೆಂದು ಕೋರಿದೆ.

# ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ 14ನೇ ವಾರ್ಷಿಕ ಮಹಾಸಭೆ



ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ 14ನೇ ವಾರ್ಷಿಕ ಮಹಾಸಭೆಯು ದಿನಾಂಕ : 20.09.2015 ರವಿವಾರದಂದು ಪುತ್ತೂರಿನ ಬೈಪಾಸ್ ರಸ್ತೆಯ ಜೈನ ಭವನದಲ್ಲಿ ನಡೆಯಿತು.

ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್ಚಂದ್ರರವರು ಸಭೆಯ ಅಧ್ಯಕ್ಷತೆಯನ್ನು ವಹಿಸಿ, ಮಾತನಾಡಿ ಆಧುನಿಕ ತಂತ್ರಜ್ಞಾನ, ಸಂಶೋಧನೆ ಹಾಗೂ ಆರ್ಥಿಕ ಕ್ಷೇತ್ರದಲ್ಲಿ ಆಗುತ್ತಿರುವ ಬದಲಾವಣೆ ಬಗ್ಗೆ ಮಾತನಾಡಿ ಸಹಕಾರಿಯನ್ನು ಸಹಕಾರಿ ಬ್ಯಾಂಕನ್ನಾಗಿ ಪರಿವರ್ತಿಸುವ ಬಗ್ಗೆ ಆಶಯವನ್ನು ವ್ಯಕ್ತಪಡಿಸಿದರು.

ಸಹಕಾರಿಯ ಅಂಕಿ ಅಂಶಗಳ ವಿವರ ಹಾಗೂ ವಾರ್ಷಿಕ ವರದಿಯನ್ನು ಮಂಡಿಸಿದ ಸಹಕಾರಿಯ ಪ್ರಧಾನ ವ್ಯವಸ್ಥಾಪಕರಾದ ಶ್ರೀ ವಸಂತ ಎ ರವರು ವರ್ಷಾಂತ್ಯಕ್ಕೆ ಸಹಕಾರಿಯು ಒಟ್ಟು ರೂ. 2.19 ಕೋಟಿ ಪಾಲು ಬಂಡವಾಳ ಹೊಂದಿದ್ದು, ರೂ. 108.94 ಕೋಟಿ ಠೇವಣಿ ಸಂಗ್ರಹಿಸಿದ್ದು, ರೂ. 87.84 ಕೋಟಿ ಸಾಲ ವಿತರಿಸಿದೆ, ರೂ. 1.98 ಕೋಟಿ ನಿವ್ವಳ ಲಾಭ ಗಳಿಸಿದೆ ಎಂದು ತಿಳಿಸಿದರು.

**ಚಾಲಕರ ಕೈಪಿಡಿ ಬಿಡುಗಡೆ :** ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್‌ವತಿಯಿಂದ "ಚಾಲಕರ ಕೈಪಿಡಿ" ಎಂಬ ಕಿರುಪುಸ್ತಕವನ್ನು ಮಾಜಿ ವಿಧಾನ ಪರಿಷತ್ ಸದಸ್ಯರಾದ ಶ್ರೀ ಅಣ್ಣಾ ವಿನಯಚಂದ್ರ ಬಿಡುಗಡೆಗೊಳಿಸಿದರು.

**ಅಭಿನಂದನಾ ಕಾರ್ಯಕ್ರಮ:** ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್. ಸತೀಶ್ಚಂದ್ರರವರು ಪ್ರತಿಷ್ಠಿತ ಅಂತರಾಜ್ಯ ಸಂಸ್ಥೆಯಾದ ಕ್ಯಾಂಪ್ಕೋದ ನೂತನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುವ ಸಲುವಾಗಿ ಸಹಕಾರಿಯ ಸದಸ್ಯ ಬಾಂಧವರ ಪರವಾಗಿ ಶ್ರೀಯುತರ ಧರ್ಮಪತ್ನಿಯ ಉಪಸ್ಥಿತಿಯೊಂದಿಗೆ ಅಭಿನಂದಿಸಲಾಯಿತು.

ಸಹಕಾರಿಯ 2014–15ನೇ ಸಾಲಿನ ಲೆಕ್ಕಪರಿಶೋಧನೆ ಮಾಡಿದ ಶ್ರೀ ಚಂದ್ರಕಾಂತ್ ರಾವ್ ಇವರನ್ನು ಸನ್ಮಾನಿಸಲಾಯಿತು. ಸಭೆಯಲ್ಲಿ ಸಹಕಾರಿಯ ಉಪಾಧ್ಯಕ್ಷರು, ಎಲ್ಲಾ ನಿರ್ದೇಶಕರುಗಳು ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ (ರಿ.), ಪುತ್ತೂರು ಇದರ ವತಿಯಿಂದ ಉಪನ್ಯಾಸ ಕಾರ್ಯಕ್ರಮ



ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ.,ದ ಸಹಸಂಸ್ಥೆ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ (ರಿ.), ಪುತ್ತೂರು ಇದರ ಆಶ್ರಯದಲ್ಲಿ ಪದವಿ ಹಾಗೂ ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿಗಳಿಗೆ ಉಪನ್ಯಾಸ ಕಾರ್ಯಕ್ರಮವು ದಿನಾಂಕ 23.09.2015ರಂದು ಡಾ. ಕೆ ಶಿವರಾಮ ಕಾರಂತ ಸರಕಾರಿ ಪ್ರಥಮ ದರ್ಜೆ ಕಾಲೇಜು, ಬೆಳ್ಳಾರೆ, ಪೆರುವಾಜೆಯಲ್ಲಿ ನಡೆಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ.,ದ ನಿರ್ದೇಶಕರಾದ ಶ್ರೀ ಅಜಿತ್ ರಾವ್ ಕೆ. ನೆರವೇರಿಸಿದರು. ಸಂಪನ್ಮೂಲ ವ್ಯಕ್ತಿಗಳಾದ ಡಾ. ನರೇಂದ್ರ ರೈ ದೇರ್ಲರವರು ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿಗಳಿಗೆ "ಗ್ರಾಮ ರಾಜ್ಯ" ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಶ್ರೀ ಸೀತಾರಾಮ ಕೇವಳರವರು ಪದವಿ ವಿದ್ಯಾರ್ಥಿಗಳಿಗೆ "ವೃತ್ತಿ ರಂಗದ ಉನ್ನತಿಗಾಗಿ ಕೌಶಲ್ಯ" ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು.

## ಆದಿಶಕ್ತಿ ಪತ್ತಿನ ಸೌಹಾರ್ದ ಸಹಕಾರಿಯ 13ನೇ ವಾರ್ಷಿಕ ಸಾಮಾನ್ಯ ಸಭೆ

ದಿನಾಂಕ : 15.09.2015 ರಂದು ಆದಿಶಕ್ತಿ ಪತ್ತಿನ ಸೌಹಾರ್ದ ಸಹಕಾರಿಯ 13ನೇ ವಾರ್ಷಿಕ ಸಾಮಾನ್ಯ ಸಭೆಯು ಹಾನಗಲ್ಲದ ಜನತಾ ಶಿಕ್ಷಣ ಸೌಹಾರ್ದ ಸಂಸ್ಥೆಯ ಪದವಿ ಪೂರ್ವ ಮಹಾವಿದ್ಯಾಲಯದ ಸಭಾ ಭವನದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ.ಬಿ.ಕಲಾಲ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ಮಹಾಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಮಾನ್ಯ ಶ್ರೀ ಸಿ.ಎಂ.ಉದಾಸಿ, ಮಾಜಿ ಲೋಕೋಪಯೋಗಿ ಸಚಿವರು, ಕರ್ನಾಟಕ ಸರಕಾರ ಇವರ ಉಪಸ್ಥಿತರಿದ್ದರು.

ಸಂಸ್ಥೆಯು 2014-15ನೇ ಸಾಲಿನಲ್ಲಿ ರೂ.27,13,30,064/-ಗಳ ಆರ್ಥಿಕ ವಹಿವಾಟು ನಡೆಸಿದ್ದು, ರೂ.22,58,544/-ಗಳ ನಿವ್ವಳ ಲಾಭ



ಗಳಿಸಿರುತ್ತದೆ. ಈ ಸಂದರ್ಭದಲ್ಲಿ SSLC ಹಾಗೂ ಕಗಅ ಯಲ್ಲಿ ಹೆಚ್ಚಿನ ಅಂಕ ಪಡೆದ ಸದಸ್ಯರ ಮಕ್ಕಳಿಗೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಪ್ರತಿಭಾ ಪುರಸ್ಕಾರಗಳನ್ನು ಮಾನ್ಯ ಶ್ರೀ ಸಿ.ಎಂ.ಉದಾಸಿ ಇವರ ಮೂಲಕ ವಿತರಿಸಲಾಯಿತು.

## ಸಿರಿಸಂಜೀವಿನಿ ಪತ್ತಿನ ಸೌಹಾರ್ದ ಸಹಕಾರಿಯ 2ನೇ ವಾರ್ಷಿಕ ಮಹಾಸಭೆ

ದಿನಾಂಕ : 30.08.2015 ರಂದು ಸಿರಿಸಂಜೀವಿನಿ ಪತ್ತಿನ ಸೌಹಾರ್ದ ಸಹಕಾರಿಯ 2ನೇ ವಾರ್ಷಿಕ ಮಹಾಸಭೆಯನ್ನು ಶ್ರೀಮತಿ ಮಂಜುಳಾ ಪಾಟೀಲ, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಚುಕ್ಕಿ ಸೂಗಪ್ಪ ಸಾಹುಕಾರ ಮತ್ತು ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಅಮರಗುಂಡಯ್ಯ ಸ್ವಾಮಿ ಹಾಗೂ ಸದಸ್ಯರು ಉಪಸ್ಥಿತರಿದ್ದರು.



## ಶ್ರೀ ಕೂಡಲಸಂಗಮ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಸರ್ವಸದಸ್ಯರ ಸಭೆ



ಶ್ರೀ ಕೂಡಲಸಂಗಮ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ನೆಲಮಂಗಲ ಸಹಕಾರಿಯ 2ನೇ ಸರ್ವಸದಸ್ಯರ ಸಭೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರವರಿಂದ ಉದ್ಘಾಟನೆ. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಎಸ್.ಬಿರಾದಾರ, ಉಪಾಧ್ಯಕ್ಷರಾದ ಶ್ರೀ ಕೃಷ್ಣರಾವ್ ದೇಸಾಯಿ, ಸಹಕಾರಿಯ ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಮಹಾಂತೇಶ್ ಎಂ. ನೆಗಳೂರ, ವೈದ್ಯ ಸಂಘದ ಅಧ್ಯಕ್ಷರಾದ ಡಾ. ಎಂ.ಜಯಪ್ರಸಾದ್‌ರವರು ಉಪಸ್ಥಿತರಿದ್ದರು.

## ಸಪ್ತರ್ಷಿ ಸೌಹಾರ್ದ ಪತ್ತಿನ ಸಹಕಾರಿ ನಿ., ಮೈಸೂರು ಸಹಕಾರಿಯ ಪದಾಧಿಕಾರಿಗಳ ಆಯ್ಕೆ



ಶ್ರೀ ನಾ.ನಾಗಚಂದ್ರ
ಅಧ್ಯಕ್ಷರು



ಶ್ರೀ ಹೆಚ್.ವಿ.ಸುಬ್ಬಣ್ಣ
ಉಪಾಧ್ಯಕ್ಷರು



ಶ್ರೀ ಕೆ.ವಿ.ನಾಗೇಂದ್ರನ್
ಗೌ॥ ಖಜಾಂಚಿ



ಪ್ರಗತಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ ಸಹಕಾರಿಯ 5ನೇ ಸಾಮಾನ್ಯ ಸಭೆ.



ಶ್ರೀ ಕನ್ನಿಕಾಪರಮೇಶ್ವರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು ಸಹಕಾರಿಯ ವತಿಯಿಂದ ವಾಸವಿ ಪ್ರೌಢಶಾಲೆಯಲ್ಲಿ ಶಿಕ್ಷಕರ ದಿನಾಚರಣೆ.



ಶ್ರೀ ಎರ್ರಿಸ್ವಾಮಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ ಸಹಕಾರಿಯ 5ನೇ ವಾರ್ಷಿಕ ಸರ್ವ ಸಾಧಾರಣ ಸಭೆ.



ಸನ್‌ರೈಸ್ ಸೌಹಾರ್ದ ಪತ್ತಿನ ಸಹಕಾರಿ ನಿ., ಕ್ಯಾತಸಂದ್ರ ಸಹಕಾರಿಯ ಸರ್ವಸದಸ್ಯರ ಸಭೆ. ಸಭೆಯಲ್ಲಿ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ.ಯಲ್ಲಿ ಉನ್ನತ ಶ್ರೇಣಿ ಪಡೆದು, ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಸಹಕಾರಿಯ ವತಿಯಿಂದ ಪ್ರತಿಭಾ ಪುರಸ್ಕಾರ ಮಾಡಲಾಯಿತು.




ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ ಸಹಕಾರಿಯ 3ನೇ ವಾರ್ಷಿಕ ಸಾಮಾನ್ಯ ಸಭೆ.



ಮಂಡ್ಯ ಜಿಲ್ಲಾ ಶ್ರೀ ಶ್ರೀ ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಂಡ್ಯ ಸಹಕಾರಿಯ 4ನೇ ವಾರ್ಷಿಕ ಸಾಮಾನ್ಯ ಸಭೆ.



ಬೆಲ್ಲದ-ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಲ್ಲದ-ಬಾಗೇವಾಡಿ ಬ್ಯಾಂಕಿನ ಸಿಬ್ಬಂದಿ ಶ್ರೀ ಪ್ರಕಾಶ ಶಂಕರ ಶೆಟ್ಟಿರವರ ಬೀಳ್ಕೊಡುಗೆ ಸಮಾರಂಭ. ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಸದಾಶಿವ ಕತ್ತಿ, ಯುವ ಧುರೀಣ ಶ್ರೀ ಲವ ರಮೇಶ ಕತ್ತಿ, ಎಲ್ಲಾ ನಿರ್ದೇಶಕರು, ಸಿಬ್ಬಂದಿ ಹಾಗೂ ಗ್ರಾಮದ ಗಣ್ಯರು ಉಪಸ್ಥಿತರಿದ್ದರು.



ಶ್ರೀ ಭುವನೇಂದ್ರ ಸ್ವಾಮೀಜಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮಂಗಳೂರು ಸಹಕಾರಿಯ 5ನೇ ವಾರ್ಷಿಕ ಸಾಮಾನ್ಯ ಸಭೆ.



ಬಲಿಜ ಸೌಹಾರ್ದ ಪತ್ತಿನ ಸಹಕಾರಿ ನಿ., ಶಿವಮೊಗ್ಗ ಸಹಕಾರಿಯ 3ನೇ ಸರ್ವ ಸದಸ್ಯರ ಸಭೆ. ಈ ಸಂದರ್ಭದಲ್ಲಿ ಸಹಕಾರಿ ವತಿಯಿಂದ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿತ್ತು.



ಶ್ರೀ ಜೇನುಕಲ್ ಸೌಹಾರ್ದ ಪತ್ತಿನ ಸಹಕಾರಿ ನಿ., ತಿಪಟೂರು ಸಹಕಾರಿಯ 8ನೇ ಸರ್ವ ಸದಸ್ಯರ ಮಹಾಸಭೆ.



ಶ್ರೀ ಮಹಾಲಕ್ಷ್ಮಿ ಸೌಹಾರ್ದ ಸಹಕಾರಿ ನಿ., ಕಲ್ಲೋಳಿ ಸಹಕಾರಿಯ ಸರ್ವ ಸಾಧಾರಣ ಸಭೆ ಸಹಕಾರಿಯ ಅಧ್ಯಕ್ಷ ಈರಣ್ಣ ಕಡಾಡಿ ಮತ್ತು ನಿರ್ದೇಶಕರು ಉಪಸ್ಥಿತರಿದ್ದರು.

ಬೋಳಾರ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ನಿ., ಬೋಳಾರ ಸಹಕಾರಿಯ 3ನೇ ವಾರ್ಷಿಕ ಸಾಮಾನ್ಯ ಸಭೆ. ಈ ಸಂದರ್ಭದಲ್ಲಿ ಹಿರಿಯ ಅಂತರಾಷ್ಟ್ರೀಯ ಕ್ರೀಡಾಪಟು ಶ್ರೀ ಯಾದವ ಸುವರ್ಣ ಬೋಳಾರ ಇವರನ್ನು ಸನ್ಮಾನಿಸಲಾಯಿತು ಹಾಗೂ ಅಂಗವಿಕಲರಾದ ಶ್ರೀ ನಾಗೇಶ್ ಭಂಡಾರಿ ಬಾಬುಗುಡ್ಡೆ ಇವರಿಗೆ ಆರ್ಥಿಕ ಸಹಾಯ ಧನವನ್ನು ನೀಡಲಾಯಿತು.





ಓಂ ಶ್ರೀ ಸಾಯಿ ಬಾಲಾಜಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಹಾವೇರಿ ಸಹಕಾರಿಯ ಕಟ್ಟಡ ಸ್ಥಳಾಂತರ ಉದ್ಘಾಟನಾ ಸಮಾರಂಭ ಮತ್ತು 3ನೇ ವರ್ಷದ ವಾರ್ಷಿಕ ಮಹಾಸಭೆ. ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಉದ್ಘಾಟಿಸಿದರು. ಹುಕ್ಕೇರಿ ಮಠದ ಸದಾಶಿವ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಂ.ಬಿ.ಕಲಾಲ, ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಬಿ.ವಿ.ರವೀಂದ್ರನಾಥ, ಸಹಕಾರಿಯ ಅಧ್ಯಕ್ಷರಾದ ಶ್ರೀ ಅಣ್ಣಪ್ಪ ಎಂ. ಸಾನು, ಉಪಾಧ್ಯಕ್ಷರಾದ ಶ್ರೀ ಉಮೇಶ ಮಹಾರಾಜಪೇಟ ಹಾಗೂ ನಿರ್ದೇಶಕರು ಉಪಸ್ಥಿತರಿದ್ದರು.




ಗಾಯತ್ರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಕೊಪ್ಪ ಸಹಕಾರಿಯ 16ನೇ ವಾರ್ಷಿಕ ಮಹಾಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಎನ್.ವಿಶ್ವನಾಥ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ. ಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ಸಹಕಾರಿಯ ಸದಸ್ಯರ ಮಕ್ಕಳಿಗೆ ಪುರಸ್ಕರಿಸಲಾಯಿತು. ಸಹಕಾರಿಯ ಆಡಳಿತ ಮಂಡಲಿಯಲ್ಲಿ ತೆರನಾದ ಎರಡು ಸಾಮಾನ್ಯ ನಿರ್ದೇಶಕ ಸ್ಥಾನಗಳಿಗೆ ಶ್ರೀ ಕೆ.ವಿ.ಪ್ರವೀಣ್ ಬಿನ್ ವಿಷ್ಣುಮೂರ್ತಿ ಕೆ.ಎಸ್. ಕೆಸವೆ ಮತ್ತು ಶ್ರೀ ಎ ದಿವಾಕರ್ ಬಿನ್ ಎ ಅಚ್ಯುತ ರಾವ್ ಕೊಪ್ಪ ಇವರು ಅವಿರೋಧವಾಗಿ ಚುನಾಯಿತರಾಗಿದ್ದಾರೆ.



ಅಹಾನ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಹೊಸಪೇಟೆ ಸಹಕಾರಿಯ ದ್ವಿತೀಯ ವಾರ್ಷಿಕ ಮಹಾಸಭೆ. ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ.ವೀರಭದ್ರರವರು ಸಹಕಾರಿಗೆ ಅಂತರರಾಷ್ಟ್ರೀಯ ಗುಣಮಟ್ಟ ಸಂಸ್ಥೆಯವರು ನೀಡಿರುವ ISO 9001:2008 ಪ್ರಮಾಣ ಪತ್ರ, ಸಹಕಾರಿಯ ವೆಬ್‌ಸೈಟ್ ಹಾಗೂ ಎಟಿಎಂನ್ನು ಅನಾವರಣಗೊಳಿಸಿದರು.



ನ್ಯಾಯಮಿತ್ರ ಸೌಹಾರ್ದ ಪತ್ತಿನ ಸಹಕಾರಿ ನಿ., ಬಾದಾಮಿ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಸದಸ್ಯರು ಹಾಗೂ ಬಿಡಿಸಿಸಿ ಬ್ಯಾಂಕಿನ ನಿರ್ದೇಶಕರೂ ಆದ ಶ್ರೀ ಹೆಚ್.ಆರ್.ನಿರಾಣಿಯವರನ್ನು ಸನ್ಮಾನಿಸಲಾಯಿತು.



ಶ್ರೀ ಚಂದೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ,. ಹಾಲಾಪುರ ಇದರ 2014–2015ನೇ ಸಾಲಿನ ಸರ್ವ ಸದಸ್ಯರ ಸಾಮಾನ್ಯ ಸಭೆ. ಸಭೆಯ ಅಧ್ಯಕ್ಷತೆಯನ್ನು ಸಹಕಾರಿ ಅಧ್ಯಕ್ಷರಾದ ಶೀ ಲಿಂಗರಾಜ ಪಾಟೀಲ್ ರವರು ವಹಿಸಿದ್ದರು.




ಶ್ರೀ ಸುವರ್ಣಗಿರಿ ಸೌಹಾರ್ದ ಪತ್ತಿನ ಸಹಕಾರಿ ನಿ., ಕನಕಗಿರಿ ಸಹಕಾರಿಯ 3ನೇ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಬಸವರಾಜ ಗುಗ್ಗುಳಶೆಟ್ರು ಇವರ ಅಧ್ಯಕ್ಷತೆಯಲ್ಲಿ ಜರುಗಿತು.



ಶ್ರೀ ಯಶಸ್ವಿನಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಬೆಂಗಳೂರು ಸಹಕಾರಿಯ ಪ್ರಥಮ ಸರ್ವಸದಸ್ಯರ ಸಾಮಾನ್ಯ ಸಭೆ.



ಸುಗ್ಗಿ ಸೌಹಾರ್ದ ಸಹಕಾರಿ ನಿ., ಕಂಕನಾಡಿ ಸಹಕಾರಿಯ ಇ-ಸ್ಟ್ಯಾಂಪಿಂಗ್ ಹಾಗೂ ಇತರ ಸೌಲಭ್ಯಗಳ ಉದ್ಘಾಟನಾ ಸಮಾರಂಭ ಮತ್ತು ವಾರ್ಷಿಕ ಮಹಾಸಭೆ.



ವಿಪ್ರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಧಾರವಾಡ ಸಹಕಾರಿಯ ಸರ್ವಸದಸ್ಯರ ವಾರ್ಷಿಕ ಸಭೆಯು ಸಹಕಾರಿಯ ಅಧ್ಯಕ್ಷರಾದ ವೆಂಕಟೇಶ ದೇಸಾಯಿಯವರ ಅಧ್ಯಕ್ಷತೆಯಲ್ಲಿ ನಡೆಯಿತು.



ಕಲ್ಲೋಳಿ ಹಾಲು ಉತ್ಪಾದಕರ ಸಹಕಾರಿ ಸಂಘದ 2014-15 ನೇ ಸಾಲಿನ ಸರ್ವ ಸಾಧಾರಣ ಸಭೆಯು ಜಿ. ಪಂ. ಮಾಜಿ ಅಧ್ಯಕ್ಷರು ಹಾಗೂ ಸಹಕಾರಿಯ ಅಧ್ಯಕ್ಷರಾದ ಈರಣ್ಣ ಕಡಾಡಿ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷರು ಹಾಗೂ ನಿರ್ದೇಶಕರು ಉಪಸ್ಥಿತರಿದ್ದರು.



ದಿನಾಂಕ : 09.09.2015ರಂದು ವಿಶ್ವಾಸ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಗಂಗಾವತಿ ಸಹಕಾರಿಯ ನೂತನ ಶಾಖೆಯನ್ನು ಬಳ್ಳಾರಿ ಜಿಲ್ಲೆಯ ಕಂಪ್ಲಿಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಉದ್ಘಾಟಿಸಿದರು. ಈ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಬಳ್ಳಾರಿ ಜಿಲ್ಲಾ ನಿರ್ದೇಶಕರಾದ ಶೀ ಎಲ್.ಎಸ್. ಆನಂದ ಹಾಗೂ ಕಲಬುರ್ಗಿ ವಿಭಾಗೀಯ ಅಧಿಕಾರಿಗಳಾದ ಶ್ರೀ ಸಂಜಯ ಕೋರಟಕರರವರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಗುರುನಾಥ ಜಾಂತಿಕರರವರಿಗೆ ಸಹಕಾರಿ ವತಿಯಿಂದ ಸನ್ಮಾನಿಸಲಾಯಿತು.



ದಿನಾಂಕ 22.09.2015ರಂದು ಪುಣ್ಯಕೋಟಿ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರ್ಗಿ ಸಹಕಾರಿಯ ನೂತನ ಶಾಖೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಉದ್ಘಾಟಿಸಿದರು. ಈ ಕಾರ್ಯಕ್ರಮದಲ್ಲಿ ಸಹಕಾರ ಭಾರತಿ ಕೋಶಾಧ್ಯಕ್ಷರಾದ ಶ್ರೀ ರಾಜಶೇಖರ, ಶ್ರೀ ಸಂಜೀವ ಮಹಾಜನ, ಶ್ರೀ ಎಸ್.ಎಸ್,ಪಾಟೀಲ, ಶ್ರೀ ಬಸವರಾಜು, ಶ್ರೀ ಸಿದ್ರಾಮಪ್ಪ ಹರಸೂರ, ಶ್ರೀ ಅಮೃತಪ್ಪ ಪಾಟೀಲ ಹಾಗೂ ಕಲಬುರ್ಗಿ ವಿಭಾಗೀಯ ಅಧಿಕಾರಿಗಳಾದ ಶ್ರೀ ಸಂಜಯ ಕೋರಟಕರರವರು ಉಪಸ್ಥಿರಿದ್ದರು.

## ಶ್ರೀ ರಾಮೇಶ್ವರ ಬಹುಉದ್ದೇಶಿ ಸೌಹಾರ್ದ ಸಹಕಾರಿಯ ನೂತನ ಕಟ್ಟಡದ ಉದ್ಘಾಟನಾ ಸಮಾರಂಭ



ಈ ಸಮಾರಂಭದಲ್ಲಿ ಶ್ರೀ ಬೆನಕ ಭಟ್ಟರು ಚಕ್ಕೋಡಬೈಲು, ಹಿರಿಯ ಸಹಕಾರಿಗಳು, ಶ್ರೀ ಕಿಮ್ಮನೆ ರತ್ನಾಕರ, ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ಶ್ರೀ ಅರಗ ಜ್ಞಾನೇಂದ್ರ, ಮಾಜಿ ಶಾಸಕರು, ತೀರ್ಥಹಳ್ಳಿ, ಶ್ರೀ ಗುರುನಾಥ ಜಾಂತಿಕರ, ಅಧ್ಯಕ್ಷರು, ಸಂಯುಕ್ತ ಸಹಕಾರಿ, ಬೆಂಗಳೂರು, ಶ್ರೀ ಕೆ. ನರಸಿಂಹ ನಾಯಕ್, ಹಿರಿಯ ಸಹಕಾರಿಗಳು, ತೀರ್ಥಹಳ್ಳಿ, ಶ್ರೀ ಎಸ್.ಆರ್.ಸತೀಶ್ಚಂದ್ರ, ಅಧ್ಯಕ್ಷರು, ಕ್ಯಾಂಪ್ಕೋ, ಮಂಗಳೂರು ಹಾಗೂ ನಿರ್ದೇಶಕರು, ಸಂಯುಕ್ತ ಸಹಕಾರಿ, ಶ್ರೀ ರವಿಕುಮಾರ್, ನಿರ್ದೇಶಕರು, ಸಂಯುಕ್ತ ಸಹಕಾರಿ, ಶ್ರೀ ಎ.ಎಸ್. ಜಯಪ್ಪ, ಸಹಕಾರಿಗಳ ಉಪನಿಬಂಧಕರು, ಶಿವಮೊಗ್ಗ, ಶ್ರೀ ರಹಮತ್ ಉಲ್ಲಾ ಅಸಾದಿ, ಅಧ್ಯಕ್ಷರು ಪಟ್ಟಣ ಪಂಚಾಯತ್, ತೀರ್ಥಹಳ್ಳಿ, ಶ್ರೀ ನಾಗರಾಜ ಶೆಟ್ಟರು, ಅಧ್ಯಕ್ಷರು, ಟಿ.ಎ.ಪಿ.ಸಿ.ಎಂ.ಎಸ್., ತೀರ್ಥಹಳ್ಳಿ, ಶ್ರೀ ಎಂ.ಎಂ. ಲಕ್ಷ್ಮೀನಾರಾಯಣ, ಅಧ್ಯಕ್ಷರು, ಕವಲೇದುರ್ಗ ಬಹುಉದ್ದೇಶಿ ಸೌಹಾರ್ದ ಸಹಕಾರಿ ನಿ., ತೀರ್ಥಹಳ್ಳಿ, ಶ್ರೀ ಮಹಾಬಲ ಭಟ್ಟರು, ರಾಜ್ಯ ಕಾರ್ಯದರ್ಶಿ, ಸಹಕಾರ ಭಾರತಿ, ಶ್ರೀ ವೆಂಕಟೇಶ ಪಟವರ್ಧನ್, ಪಟ್ಟಣ ಪಂಚಾಯಿತಿ ಸದಸ್ಯರು, ಶ್ರೀ ಕೃಷ್ಣ ಜೋಯ್ಸ್‌ರು ದರಲಗೋಡು ಕೃಷಿಕರು, ಶ್ರೀ ಟಿ.ಎ. ಚಂದ್ರಶೇಖರ ತುಂಬರಮನೆ, ಅಧ್ಯಕ್ಷರು, ಶ್ರೀ ರಾಮೇಶ್ವರ ಬಹುಉದ್ದೇಶಿ ಸೌಹಾರ್ದ ಸಹಕಾರಿ ನಿ., ತೀರ್ಥಹಳ್ಳಿ ಮತ್ತು ಸಹಕಾರಿಯ ಆಡಳಿತ ಮಂಡಲಿಯ ನಿರ್ದೇಶಕರು, ಸದಸ್ಯರು ಉಪಸ್ಥಿತರಿದ್ದರು.

## ಉದಯ ಸೌಹಾರ್ದ ಪತ್ತಿನ ಸಹಕಾರಿಯ 20ನೇ ವಾರ್ಷಿಕ ಸರ್ವ ಸದಸ್ಯರ ಸಭೆ

ಉದಯ ಸೌಹಾರ್ದ ಪತ್ತಿನ ಸಹಕಾರಿಯ 20ನೇ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ದಿನಾಂಕ : 20.09.2015ರಂದು ಸಹಕಾರ ಸಮುದಾಯ ಭವನ, ಪದ್ಮನಾಭನಗರ, ಬೆಂಗಳೂರು ಇಲ್ಲಿ ನಡೆಸಲಾಯಿತು. ಪ್ರಸಕ್ತ ಸಾಲಿನಲ್ಲಿ ನಿವ್ವಳ ಲಾಭ ರೂ. 1,94,20,550/-ಗಳನ್ನು ಗಳಿಸಿದೆ. ಸಹಕಾರಿಯ ಒಟ್ಟು ದುಡಿಯುವ ಬಂಡವಾಳ ರೂ. 54 ಕೋಟಿ 25 ಲಕ್ಷಗಳಾಗಿರುತ್ತದೆ.

ಈ ಸಂದರ್ಭದಲ್ಲಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ಶ್ರೀ ಎ.ಟಿ. ರಾಮಸ್ವಾಮಿ (ಮಾಜಿ ಶಾಸಕರು), ಬೆಂಗಳೂರು, ಶ್ರೀ ನಾಗೇಶ್ (ಚಲನಚಿತ್ರ ನಟರು), ಕರ್ನಾಟಕವನ್ನು ಪ್ರತಿನಿಧಿಸುತ್ತಿರುವ ಆರ್ಥಿಕವಾಗಿ ಹಿಂದುಳಿದ ರಾಷ್ಟ್ರೀಯ ಸ್ಕೇಟಿಂಗ್ ಕ್ರೀಡಾಪಟುಗಳಾದ ಕು. ಮಾದಪ್ಪ ಮಾಣಿಕ್ ಖುರ್ನಿ, ಕು. ಸೀಮಾ ಪರಶುರಾಮ್ ಅಡಗಲ್ ಮತ್ತು ಕು. ರೇಣುಕಾ ಪ್ರಹ್ಲಾದ್ ದಂಡಿನರವರುಗಳನ್ನು ಹಾಗೂ ಸಹಕಾರಿಯ ಹತ್ತು ಹಿರಿಯ ಸದಸ್ಯರುಗಳನ್ನು ಸನ್ಮಾನ ಸ್ಮರಣಿಕೆ ಮತ್ತು ನಗದು ಗೌರವ ನೀಡುವ ಮೂಲಕ ಸನ್ಮಾನಿಸಲಾಯಿತು.

## ದಿಗಂಬರೇಶ್ವರ ಕ್ರೆಡಿಟ್ ಸೌಹಾರ್ದ ಕೋ-ಆಪರೇಟಿವ್ ನಿ., ಹನಗಂಡಿ




ದಿಗಂಬರೇಶ್ವರ ಕ್ರೆಡಿಟ್ ಸೌಹಾರ್ದ ಕೋ-ಆಪರೇಟಿವ್ ನಿ., ಹನಗಂಡಿ ಸಹಕಾರಿಯು ಪ್ರಾರಂಭವಾಗಿ 6 ವರ್ಷಗಳು ಕಳೆದಿದ್ದು, ಗ್ರಾಮದಲ್ಲಿ ವಿವಿಧ ರೀತಿಯ ಸೇವೆಗಳನ್ನು ನೀಡುವುದರೊಂದಿಗೆ ಗ್ರಾಮದ ಎಲ್ಲ ಜನರ ಮೆಚ್ಚುಗೆಗೆ ಪಾತ್ರವಾಗಿದೆ. ಅಷ್ಟೇ ಅಲ್ಲದೇ ಸಿಬ್ಬಂದಿಗಳಿಗೆ ಒಂದೇ ತರನಾದ ಸಮವಸ್ತ್ರ ಹಾಗೂ ಗುರುತಿನ ಚೀಟಿ ಹೊಂದಿದ್ದು, ಇದರಿಂದ ಬಹಳಷ್ಟು ಜನರು ಆಕರ್ಷಣೆಯಾಗಿದ್ದು, ಹಲವಾರು ಸಹಕಾರಿಗಳು ಸಹ ಮೆಚ್ಚುಗೆ ವ್ಯಕ್ತಪಡಿಸಿವೆ.

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲು ನಿರ್ಧರಿಸಲಾಗಿದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ – ಸಂಪಾದಕರು

## ನಿಮ್ಮ ಪ್ರಶ್ನೆ




## ನಮ್ಮ ಉತ್ತರ

**ಶ್ರೀಕಾಂತ ಬರುವೆ**

ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ

**1. ದುಡಿಯುವ ಬಂಡವಾಳದ ಮೇಲೆ ಶೇಕಡ ಎಷ್ಟು ನೌಕರರ ವೇತನ, ಭತ್ಯೆಗಾಗಿ ಖರ್ಚು ಮಾಡಬಹುದು?**

**ಉತ್ತರ** : ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ಅಥವಾ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರಲ್ಲಾಗಲೀ ಸಹಕಾರಿಯ ನೌಕರರ ವೇತನ, ಭತ್ಯೆಗಾಗಿ ದುಡಿಯುವ ಬಂಡವಾಳದ ಮೇಲೆ ಶೇಕಡಾ ಎಷ್ಟು ಖರ್ಚು ಮಾಡಬಹುದು ಎಂಬುದರ ಉಲ್ಲೇಖವಿರುವುದಿಲ್ಲ. ಆದರೆ, ಈ ಕುರಿತು ಸಹಕಾರಿಯ ಉಪವಿಧಿಯಲ್ಲಿ ಅಥವಾ ಒಳನಿಯಮಗಳಲ್ಲಿ ಪ್ರಾವಧಾನ ಕಲ್ಪಿಸಿಕೊಂಡಿದ್ದಲ್ಲಿ, ಅದರಂತೆ ನಡೆದುಕೊಳ್ಳುವುದು ಕಡ್ಡಾಯವಾಗಿರುತ್ತದೆ.

**ಗಮನಿಸಿ** : ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, 1960ರ ನಿಯಮ ಸಂಖ್ಯೆ:17ರನ್ವಯ ಹಿಂದಿನ ಮೂರು ವರ್ಷಗಳ ಅವಧಿಯಲ್ಲಿ ನಿರಂತರವಾಗಿ ನಷ್ಟಕ್ಕೊಳಗಾಗಿರುವ ಅಥವಾ ಸಂಚಿತ ನಷ್ಟಕ್ಕೊಳಗಾಗಿರುವ ಅಥವಾ ಹಿಂದಿನ ವರ್ಷಾಂತ್ಯಕ್ಕೆ ಇದ್ದಂತೆ ದುಡಿಯುವ ಬಂಡವಾಳ ಅಥವಾ ವಹಿವಾಟಿಗೆ ಹೋಲಿಸಿದಲ್ಲಿ ಸಿಬ್ಬಂದಿ ಖರ್ಚಿನ ಅನುಪಾತವು ಶೇ.2ಕ್ಕಿಂತ ಹೆಚ್ಚಾಗಿರುವ ಸಹಕಾರ ಸಂಘದ ಸಂದರ್ಭದಲ್ಲಿ ರಿಜಿಸ್ಟ್ರಾರನ ಪೂರ್ವಾನುಮೋದನೆಯನ್ನು ಪಡೆದುಕೊಳ್ಳಬೇಕಾಗುತ್ತದೆ.

**2. ಒಬ್ಬ ನಿರ್ದೇಶಕ, ನಿರ್ದೇಶಕ ಮಂಡಲಿ ಸಭೆಗೆ ಎಷ್ಟು ಬಾರಿ ಅನುಮತಿ ಕೋರಿ ಪತ್ರ ನೀಡಬಹುದು?**

**ಉತ್ತರ** : ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 25 (1) (ಬಿ)ರನ್ವಯ ಸಹಕಾರಿಯ ನಿರ್ದೇಶಕನು ಆಡಳಿತ ಮಂಡಲಿಯ ಅನುಮತಿಯನ್ನು ಪಡೆದುಕೊಳ್ಳದೇ ಮೂರು ನಿರಂತರ ಸಭೆಗಳಿಗೆ ಗೈರುಹಾಜರಾದರೆ ಅಂತಹ ನಿರ್ದೇಶಕನು ನಿರ್ದೇಶಕನಾಗಿ ಚುನಾಯಿತನಾಗಲು ಅಥವಾ ಮುಂದುವರಿಯಲು ಅನರ್ಹನಾಗಿರುತ್ತಾನೆ. ಆದರೆ, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರಲ್ಲಿ ನಿರ್ದೇಶಕನು ಆಡಳಿತ/ ನಿರ್ದೇಶಕ ಮಂಡಲಿ ಸಭೆಗೆ ಅನುಮತಿ ಕೋರಿ ಎಷ್ಟು ಬಾರಿ ಪತ್ರ ಬರೆಯಬಹುದು ಎಂಬುದರ ಕುರಿತು ಉಲ್ಲೇಖವಿರುವುದಿಲ್ಲ. ಸಹಕಾರಿಯ ಆಡಳಿತ/ ನಿರ್ದೇಶಕ ಮಂಡಲಿ ಸಭೆಗೆ ಗೈರುಹಾಜರಿಗೆ ಅನುಮತಿಯನ್ನು ಪಡೆದುಕೊಳ್ಳುವುದು ಕಡ್ಡಾಯವಾಗಿರುತ್ತದೆ. ಸಹಕಾರಿಯ ಆಡಳಿತ ಮಂಡಲಿಯು ಗೈರುಹಾಜರಿಯ ಕಾರಣವನ್ನು ಪರಿಶೀಲಿಸಿ, ಗೈರುಹಾಜರಿಗೆ ಅನುಮತಿ ನೀಡುವ ಅಥವಾ ನೀಡದಿರುವ ವಿವೇಚನಾ ಅಧಿಕಾರವನ್ನು ಹೊಂದಿರುತ್ತದೆ. ಸಹಕಾರಿಯ ನಿರ್ದೇಶಕನು ಕ್ರಿಯಾಶೀಲವಾಗಿ ಸಹಕಾರಿಯ ಆಡಳಿತ ಮಂಡಲಿಯ ಸಭೆಯಲ್ಲಿ ಭಾಗವಹಿಸುವುದರ ಮೂಲಕ ಸಹಕಾರಿಯ ಅಭಿವೃದ್ಧಿಗೆ ಪೂರಕವಾದ ಸಲಹೆಯನ್ನು ನೀಡಬೇಕೆನ್ನುವುದು ಈ ಪ್ರಾವಧಾನದ ಆಶಯವಾಗಿದೆ.


**3. ವೃತ್ತಿಪರ ನಿರ್ದೇಶಕರು ಹಾಗೂ ಕಾರ್ಯಾನುಗುಣ ನಿರ್ದೇಶಕರು ವ್ಯತ್ಯಾಸವಿದೆಯೇ? ಇದ್ದರೆ ವ್ಯತ್ಯಾಸ ತಿಳಿಸಿ.**

ಉತ್ತರ : ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರಲ್ಲಿ ವೃತ್ತಿಪರ ನಿರ್ದೇಶಕರ ಉಲ್ಲೇಖವಿರುವುದಿಲ್ಲ. ಆದಾಗ್ಯೂ, ತಾವು ಕೇಳಿರುವ ಪ್ರಶ್ನೆಯ ಭಾವಾರ್ಥದ ಆಧಾರದ ಮೇಲೆ ಈ ಕೆಳಗಿನ ಎಲ್ಲಾ ಪ್ರಶೆಗಳಿಗೆ ಉತ್ತರಿಸಲಾಗಿರುತ್ತದೆ.

ವೃತ್ತಿಪರ ನಿರ್ದೇಶಕರು ಹಾಗೂ ಕಾರ್ಯಾನುಗುಣ ನಿರ್ದೇಶಕರಿಗೂ ವ್ಯತ್ಯಾಸವಿದೆ. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 24 (1) ರನ್ವಯ ಬ್ಯಾಂಕಿಂಗ್, ವ್ಯವಸ್ಥಾಪನೆ ಮತ್ತು ಹಣಕಾಸು ನಿರ್ವಹಣೆಯಲ್ಲಿ ಅನುಭವವಿರುವ ಅಥವಾ ಸಹಕಾರಿಯು ಕೈಗೊಂಡ ಚಟುವಟಿಕೆಗಳಿಗೆ ಮತ್ತು ಉದ್ದೇಶಗಳಿಗೆ ಸಂಬಂಧಿಸಿದ ಇತರೆ ಯಾವುದೇ ಕ್ಷೇತ್ರದಲ್ಲಿ ಪರಿಣತಿಯನ್ನು ಹೊಂದಿರುವ ವ್ಯಕ್ತಿಗಳನ್ನು ಆಡಳಿತ ಮಂಡಲಿಗೆ ಸೇರಿಸಿಕೊಳ್ಳಬೇಕು.

ಸಾಮಾನ್ಯವಾಗಿ ಇವರನ್ನು ವೃತ್ತಿಪರ ನಿರ್ದೇಶಕರೆನ್ನುತ್ತಾರೆ. ಆದರೆ, ಕಾರ್ಯಾನುಗುಣ ನಿರ್ದೇಶಕರ ಕುರಿತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 24 (1)ರಲ್ಲಿ ಉಲ್ಲೇಖವಿದ್ದು, ಕಾರ್ಯಾನುಗುಣ ನಿರ್ದೇಶಕರು ಎಂದರೆ ಯಾರು ಎಂಬುದನ್ನು ತಿಳಿಸಿರುವುದಿಲ್ಲ. ಆದಾಗ್ಯೂ, ಪ್ರಚಲಿತದಲ್ಲಿರುವ ಪದ್ಧತಿಯನ್ವಯ ಕಾರ್ಯಾನುಗುಣ ನಿರ್ದೇಶಕರೆಂದರೆ ಆಯಾ ಸಹಕಾರಿ ಸಂಸ್ಥೆಗಳಲ್ಲಿ ವಿವಿಧ ವಿಭಾಗಗಳಿಗೆ ಇರುವ ನೌಕರ ನಿರ್ದೇಶಕರು ತಮ್ಮ ಹುದ್ದೆಯ ಕಾರಣದಿಂದ ಆಡಳಿತ ಮಂಡಲಿಯಲ್ಲಿ ನಿರ್ದೇಶಕರಾಗಿರುತ್ತಾರೆ.

# ಸಹಕಾರಿ ಚಳುವಳಿಯ ನೇತಾರ ವೈಕುಂಠ ಮೆಹತಾ



ವೈಕುಂಠ ಭಾಯಿ ಮೆಹತಾರವರು ಭಾರತದ ಸಹಕಾರ ಚಳುವಳಿಯ ನೇತಾರರು. ಅವರು ಗುಜರಾತಿನ ಭಾವನಗರದಲ್ಲಿ 1891 ಅಕ್ಟೋಬರ್ 26ರಂದು ಜನಿಸಿದರು. ಅವರ ತಂದೆ ಸಾಕಷ್ಟು ಶ್ರೀಮಂತರಾಗಿ ಸಮಾಜದಲ್ಲಿ ಒಳ್ಳೆಯ ಹೆಸರು ಗಳಿಸಿದ್ದರು. ವೈಕುಂಠ ಮೆಹತಾರವರು ಸಹಕಾರಿ ಶಿಕ್ಷಣ ಮತ್ತು ತರಬೇತಿಗೆ ಅತ್ಯಂತ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದರು. ಅದು ಸಹಕಾರಿಯ ತಳಪಾಯವೆಂದು ಭಾವಿಸಿದ್ದರು. ಅವರ ಪ್ರಕಾರ, “ಸಹಕಾರಿ ತರಬೇತಿಯು ಅವಶ್ಯಕತೆ ಮಾತ್ರವಲ್ಲ, ಸಹಕಾರಿ ಚಟುವಟಿಕೆಗಳ ಮೂಲ” ಎಂದು ಹೇಳುತ್ತಿದ್ದರು. ಅವರಿಂದ ಪ್ರಭಾವಿತರಾದ ಯಶವಂತರಾವ್ ಚವ್ಹಾಣ್, ಡಾ.ವರ್ಗಿಸ್ ಕುರಿಯನ್, ಗುಲಾಬ್‌ರಾವ್ ಪಾಟೀಲ್ ಸಹಕಾರಿ ಕ್ಷೇತ್ರದಲ್ಲಿ ಕ್ರಾಂತಿಯನ್ನೇ ಮಾಡಿದರು.

ವೈಕುಂಠ ಮೆಹತಾ ಭಾರತದ ಸಹಕಾರ ಚಳುವಳಿಯ ನೇತಾರ ಎಂಬ ಹೆಸರನ್ನು ಪಡೆದಿದ್ದಾರೆ. ಮಹಾರಾಷ್ಟ್ರ ರಾಜ್ಯ ಸಹಕಾರ ಬ್ಯಾಂಕಿನ ಮುಖ್ಯಸ್ಥರಾಗಿ 35 ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಗ್ರಾಮೀಣ ಕೈಗಾರಿಕಾ ಆಯೋಗದ ಮೊದಲ ಅಧ್ಯಕ್ಷರಾಗಿ, ಹಿಂದಿನ ಮುಂಬೈ ರಾಜ್ಯದ ಆರ್ಥಿಕ ಮತ್ತು ಸಹಕಾರ ಮಂತ್ರಿಗಳಾಗಿ ಸಹ ಸೇವೆ ಸಲ್ಲಿಸಿದರು. ಸಹಕಾರ ಕ್ಷೇತ್ರಕ್ಕೆ ಅವರು ಸಲ್ಲಿಸಿದ ಸೇವೆಯನ್ನು ಪರಿಗಣಿಸಿ, ಪೂನಾದ ರಾಷ್ಟ್ರೀಯ ಸಹಕಾರ ತರಬೇತಿ ಕೇಂದ್ರಕ್ಕೆ ವೈಕುಂಠ ಮೆಹತಾ ಅವರ ಹೆಸರನ್ನಿಡಲಾಗಿದೆ. ಅದೀಗ The Vaikunth Mehta National Institute of co-operative Management (VAMNICOM) ಎಂದು ಹೆಸರು ಗಳಿಸಿದೆ. ಇಲ್ಲಿ ಕಳೆದ 50 ವರ್ಷಗಳಿಂದ ಆಡಳಿತ ಅಭಿವೃದ್ಧಿ, ತರಬೇತಿ, ಸಂಶೋಧನೆ ಮತ್ತು ವಿವಿಧ ಸಹಕಾರಿ ಸಂಸ್ಥೆಗಳ, ಸರ್ಕಾರಿ ಇಲಾಖೆಗಳ ಮತ್ತಿತರ ರಾಷ್ಟ್ರೀಯ ಸಂಸ್ಥೆಗಳ ಅವಶ್ಯಕತೆಗನು ಗುಣವಾಗಿ ಕಾರ್ಯ ನಿರ್ವಹಿಸುತ್ತಾ ಬಂದಿದೆ. ಕಳೆದ ವರ್ಷ ರಾಜ್ಯ ಸೌಹಾರ್ದ ಫೆಡರಲ್ ವತಿಯಿಂದ ಸಹಕಾರಿಗಳನ್ನು ಅಧ್ಯಯನ ಪ್ರವಾಸ ಕರೆದೊಯ್ದಿದ್ದಾಗ ಈ ಸಂಸ್ಥೆಗೆ ಭೇಟಿ ನೀಡಿದ್ದನ್ನು ಮರೆಯಲಾಗದು. ಅವರು ಶ್ರೀಮಂತ ಕುಟುಂಬದಿಂದ ಬಂದಿದ್ದರೂ ಸಹ ಸರಳ ಜೀವಿಯಾಗಿದ್ದರು. ಅವರ ವಿದ್ಯಾರ್ಥಿ ಜೀವನದಲ್ಲಿ ನಡೆದ ಒಂದು ಘಟನೆ ಅವರ ಹೃದಯ ವೈಶಾಲ್ಯತೆಗೆ ಹಿಡಿದ ಕೈಗನ್ನಡಿಯಾಗಿದೆ. 1900ರ ಸಮಯದಲ್ಲಿ ಅವರು ಮುಂಬೈನ ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿ ಓದುತ್ತಿದ್ದಾಗ ತುಂಬಾ ಪ್ರತಿಭಾಶಾಲಿಗಳೆಂದು ಹೆಸರು ಗಳಿಸಿದ್ದರು. ಆಗ ಪ್ರತಿಭಾವಂತ ವಿದ್ಯಾರ್ಥಿಗೆ ಒಂದು ವಿದ್ಯಾರ್ಥಿವೇತನ ಕೊಡಲಾಗುತ್ತಿತ್ತು. ಆ ವಿದ್ಯಾರ್ಥಿ ವೇತನಗಿಟ್ಟಿಸಲು ಮೆಹತಾ ಮತ್ತು ಮತ್ತೊಬ್ಬ ಪ್ರತಿಭಾಶಾಲಿ ವಿದ್ಯಾರ್ಥಿ ಮಹಾದೇವ ದೇಸಾಯಿಯವರ ನಡುವೆ ತೀವ್ರವಾದ ಪೈಪೋಟಿ ಇತ್ತು. ಮೆಹತಾ ಶ್ರೀಮಂತ ಕುಟುಂಬದಿಂದ ಬಂದವರಾಗಿದ್ದರೆ, ದೇಸಾಯಿ ಬಡಕುಟುಂಬದಿಂದ ಬಂದಿದ್ದರು. ಆದ್ದರಿಂದ ಸಹಜವಾಗಿಯೇ ದೇಸಾಯಿಯವರಿಗೆ ಆ ವಿದ್ಯಾರ್ಥಿ ವೇತನದ ಅವಶ್ಯಕತೆ ತುಂಬಾ ಇತ್ತು. ಆದರೆ ದೇಸಾಯಿಯವರಿಗಿಂತ ಉತ್ತಮ ಅಂಕ ಗಳಿಸಿದ ಮೆಹತಾ ವಿದ್ಯಾರ್ಥಿವೇತನ ಪಡೆಯಲು ಸಫಲರಾಗಿದ್ದರು. ಇದರಿಂದ ಮಹಾದೇವ ದೇಸಾಯಿ ಕಾಲೇಜು ವಿದ್ಯಾಭ್ಯಾಸ ಮಾಡಲು ಸಾಧ್ಯವಾಗದೇ ಕಾಲೇಜು ತೊರೆಯುವ ಅನಿವಾರ್ಯತೆ ಹೆಚ್ಚಾಗಿತ್ತು. ಇದನ್ನರಿತ ವೈಕುಂಠ ಮೆಹತಾಗೆ ತನ್ನ ಸಹಪಾಠಿಗೆ ಹೇಗಾದರೂ ಸಹಾಯ ಮಾಡಬೇಕೆಂಬ ತವಕ.

ಅವರಿಗೆ ಆ ವಿದ್ಯಾರ್ಥಿವೇತನ ಒಂದು ಗೌರವ ಅಷ್ಟೆ. ಅದರಿಂದೇನೂ ಅವರು ಓದಬೇಕಾಗಿರಲಿಲ್ಲ. ಅದಕ್ಕಾಗಿ ಅವರು ತಮಗೆ ಬಂದ ವಿದ್ಯಾರ್ಥಿವೇತನವನ್ನು ತಿರಸ್ಕರಿಸಿದರು. ಪ್ರಾಚಾರ್ಯರ ಕೊಠಡಿಗೆ ಹೋಗಿ, ತಮಗೆ ಮಂಜೂರಾದ ವಿದ್ಯಾರ್ಥಿವೇತನವನ್ನು ಶಿಕ್ಷಣ ಮುಂದುವರೆಸಲು ಪರದಾಡುತ್ತಿರುವ ತನ್ನ ಸಹಪಾಠಿ ಮಹಾದೇವ ದೇಸಾಯಿಯವರಿಗೇ ನೀಡಬೇಕೆಂದು ಬರೆದು ಕೊಟ್ಟರು. ಪ್ರಾಚಾರ್ಯರು ಮೆಹತಾ ಅವರ ಉದಾರತೆಯನ್ನು ಬಹುವಾಗಿ ಕೊಂಡಾಡಿ ಆ ವಿದ್ಯಾರ್ಥಿ ವೇತನವನ್ನು ಮಹಾದೇವ ದೇಸಾಯಿಯವರಿಗೆ ನೀಡಿದರು.

ಮುಂದೆ ಇವರಿಬ್ಬರೂ ಜೀವನದಲ್ಲಿ ಯಶಸ್ವಿಯಾಗಿ ಕೀರ್ತಿ ಗಳಿಸಿದರು. ವೈಕುಂಠ ಮೆಹತಾ ಮುಂಬೈ ರಾಜ್ಯದ ಮೊದಲ ಅರ್ಥ ಸಚಿವರಾದರೆ, ಮಹಾದೇವ ದೇಸಾಯಿ ಮಹಾತ್ಮ ಗಾಂಧಿಯವರ ಕಾರ್ಯದರ್ಶಿಯಾಗಿ ಕೊನೆಯವರೆಗೂ ಅವರೊಟ್ಟಿಗೆ ಇದ್ದು ಪ್ರಸಿದ್ಧರಾದರು.

ಇಂತಹ ಅದ್ಭುತ ವ್ಯಕ್ತಿತ್ವವಿರುವ ವೈಕುಂಠ ಮೆಹತಾರವರು ಅಕ್ಟೋಬರ್ 27, 1964ರಲ್ಲಿ ಮರಣಿಸಿದಾಗ ಸಹಕಾರಿ ಕ್ಷೇತ್ರದ ಧ್ರುವ ನಕ್ಷತ್ರವೊಂದರ ಪತನವಾಯಿತು. ಅವರ ಸ್ಮರಣಾರ್ಥ ರಾಷ್ಟ್ರೀಯ ಸಹಕಾರಿ ಯೂನಿಯನ್‌ರವರು ಪ್ರತಿವರ್ಷ ನವದೆಹಲಿಯಲ್ಲಿ ವೈಕುಂಠ ಮೆಹತಾ ಸ್ಮಾರಕ ಉಪನ್ಯಾಸಗಳನ್ನೇರ್ಪಡಿಸಿ, ಅವರು ಭಾರತದ ಸಹಕಾರಿ ಚಳುವಳಿಗೆ ನೀಡಿದ ಸೇವೆಯನ್ನು ಸ್ಮರಿಸಲಾಗುತ್ತಿದೆ.

– ಎಂ.ಎಸ್.ಸುಂದರರಾಜ್

ಅಧ್ಯಕ್ಷರು, ಕಲಾವಿದರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ

# ಕೇರಳ ಸಹಕಾರಿ ಕಾಯ್ದೆ ಹಾಗೂ ಸಹಕಾರ ಸಂಸ್ಥೆಗಳು ಅಧ್ಯಯನ ಯೋಗ್ಯ – ಗುರುನಾಥ ಜಾಂತಿಕರ




ದೇಶದ ದಕ್ಷಿಣದ ಅರಬ್ಬಿ ಸಮುದ್ರ ಹಾಗೂ ಹಿಂದೂ ಮಹಾಸಾಗರಗಳಿಗೆ ಹೊಂದಿಕೊಂಡಿರುವ ಸಮೃದ್ಧ ರಾಜ್ಯ ಕೇರಳ ಸಾಕ್ಷರತೆಯಲ್ಲಿ, ಶೈಕ್ಷಣಿಕ ಕ್ಷೇತ್ರದಲ್ಲಿ, ಔದ್ಯೋಗಿಕ ಕ್ಷೇತ್ರದಲ್ಲಿ, ಸಾಮಾಜಿಕ ಕ್ಷೇತ್ರದಲ್ಲಿ ಹಾಗೂ ಆರೋಗ್ಯ ಕ್ಷೇತ್ರದಲ್ಲಿ ಮುಂದುವರೆದಂತೆ ಸಹಕಾರ ಕ್ಷೇತ್ರದಲ್ಲೂ ಸಹ ಮುಂದುವರೆದ ರಾಜ್ಯ ಇದಾಗಿದೆ. 1969ರಲ್ಲಿ ಕೇರಳ ರಾಜ್ಯದಲ್ಲಿ ಸಹಕಾರ ಕಾಯ್ದೆ ಜಾರಿಗೆ ಬಂದಿದೆ. 2010ರಲ್ಲಿ ಸಮಗ್ರ ತಿದ್ದುಪಡಿ ಜಾರಿಗೆ ಬಂದ ನಂತರ ದೇಶದಲ್ಲಿ 97ನೇ ಸಂವಿಧಾನ ತಿದ್ದುಪಡಿ ಜಾರಿಗೆ ಬಂದ ನಂತರ ಕೇರಳ ರಾಜ್ಯವೂ ಅದನ್ನು ಅನುಷ್ಠಾನಗೊಳಿಸಿ, 2014ರಲ್ಲಿ ಮತ್ತೊಮ್ಮೆ ತಿದ್ದುಪಡಿ ಮಾಡಿ, ಜಾರಿಗೊಳಿಸಿದೆ. ಕೇರಳ ಸಹಕಾರ ಕಾಯ್ದೆಯಲ್ಲಿ ಕೆಲವು ವೈಶಿಷ್ಟ್ಯತೆಗಳಿವೆ. ಕ್ಷೇತ್ರದ ಅಭಿವೃದ್ಧಿಯ ದೃಷ್ಟಿಯಿಂದ ಈ ವೈಶಿಷ್ಟತೆಗಳು ಉಳಿದ ರಾಜ್ಯಗಳ ಸಹಕಾರ ಕಾಯ್ದೆಗೆ ಮಾದರಿ ಹಾಗೂ ಅನುಕರಣೀಯವೆಂದು ಹೇಳಬಹುದು.

ಈ ರಾಜ್ಯದ ಸಹಕಾರ ಕ್ಷೇತ್ರವನ್ನು ಎರಡು ಭಾಗವಾಗಿ ಅಧ್ಯಯನ ಮಾಡಬಹುದು. ಸಾಗರ ಅಂಚಿನ ಪ್ರದೇಶದ ಸಹಕಾರ ಸಂಸ್ಥೆಗಳು ಮತ್ತು ಒಳನಾಡು ವ್ಯಾಪ್ತಿಯ ಸಹಕಾರ ಸಂಸ್ಥೆಗಳು. ಸಾಗರ ಅಂಚಿನ ನಾಡಿನ ವ್ಯಾಪ್ತಿಯಲ್ಲಿ ಅನೇಕ ವಿಧವಾದ ವಿಶಿಷ್ಠ ರೀತಿಯ ಸಹಕಾರ ಸಂಸ್ಥೆಗಳನ್ನು ಕಾಣಬಹುದು. ಈ ಪ್ರದೇಶದ ಎಲ್ಲಾ ಸಹಕಾರ ಸಂಸ್ಥೆಗಳು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಒಳನಾಡು ವ್ಯಾಪ್ತಿಯಲ್ಲಿ ಕೃಷಿ ಪತ್ತಿನ ಸಹಕಾರ ಸಂಘಗಳು ಮಾತ್ರ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಉಳಿದವುಗಳು ಅಷ್ಟು ಆರೋಗ್ಯಕರವಾಗಿಲ್ಲ. ಪ್ರಸ್ತುತ ಕೇರಳ ರಾಜ್ಯದಲ್ಲಿ ಸಹಕಾರ ಸಂಸ್ಥೆಗಳ ಸಂಖ್ಯೆ 20,229. ಅವುಗಳಲ್ಲಿ ನೇರವಾಗಿ ಸಹಕಾರ ಸಂಸ್ಥೆಗಳ ನಿಬಂಧಕರ ವ್ಯಾಪ್ತಿಗೆ 14,204 ಸಹಕಾರಿ ಸಂಸ್ಥೆಗಳಿವೆ (under the Direct control of Registrar). ಅವುಗಳಲ್ಲಿ 3,816 ಕೃಷಿ ಪತ್ತಿನ ಸಹಕಾರ ಸಂಘಗಳು, ಗ್ರಾಹಕರ ಸಹಕಾರ ಸಂಘಗಳು 4,696, ಇವುಗಳಲ್ಲಿ ಮಾರಾಟ ಹಾಗೂ ಸಂಸ್ಕರಣ ಸಹಕಾರ ಸಂಘಗಳು 591, ಹಾಲು ಉತ್ಪಾದಕರ ಸಹಕಾರ ಸಂಘಗಳು, ಮೀನುಗಾರರ ಸಹಕಾರ ಸಂಘಗಳು 836, ಕೈಗಾರಿಕಾ ಸಹಕಾರ ಸಂಘಗಳು 1,816, ಕೈಮಗ್ಗ ನೇಕಾರರ ಸಹಕಾರ ಸಂಘಗಳು 758, ಕ್ವಾಯರ ಸಹಕಾರ ಸಂಘಗಳು 826, ಪಟ್ಟಣ ಸಹಕಾರ ಬ್ಯಾಂಕುಗಳು 60, ಕ್ರೆಡಿಟ್ ಸಹಕಾರ ಸಂಘಗಳು 410, ಅಲ್ಲದೇ ಶೈಕ್ಷಣಿಕ ಸಹಕಾರ ಸಂಘಗಳು, ಪ್ರವಾಸೋದ್ಯಮ ಸಹಕಾರ ಸಂಘಗಳು, ಅಂತ್ಯ ಸಂಸ್ಕಾರ ಸಹಕಾರ ಸಂಘಗಳು, ಮಂಗಳ ಸೂತ್ರ ಸಹಕಾರ ಸಂಘಗಳು, ಮಹಿಳಾ ಸಹಕಾರ ಸಂಘಗಳು, ಸಹಕಾರಿ ಆಸ್ಪತ್ರೆಗಳು, ಆನೆ ಮಾಲೀಕರ ಸಹಕಾರ ಸಂಘಗಳು ಹೀಗೆ ಹಲವು ವಿಧವಾದ ವಿಶಿಷ್ಠ ರೀತಿಯ ಸಹಕಾರ ಸಂಘಗಳನ್ನು ಈ ರಾಜ್ಯದಲ್ಲಿ ಕಾಣಬಹುದಾಗಿದೆ. ಇವುಗಳಲ್ಲಿ 76% ಕಾರ್ಯನಿರ್ವಹಿಸುತ್ತಿವೆ. 19% ಸ್ಥಗಿತಗೊಂಡಿರುವ ಸಹಕಾರ ಸಂಸ್ಥೆಗಳು, ಕೇವಲ 4.19% ಮಾತ್ರ ಸಮಾಪನೆ ಹಂತದಲ್ಲಿವೆ. ಇವೆಲ್ಲವೂ ಉಳಿದ 6,025 ಸಹಕಾರ ಸಂಸ್ಥೆಗಳು (under the Control Functional Registrar) ಆಯಾ ಕ್ಷೇತ್ರದ ಇಲಾಖೆಯ ನಿರ್ದೇಶಕರ ವ್ಯಾಪ್ತಿಗೆ ಒಳಪಟ್ಟಿವೆ. ಅವರುಗಳಿಗೆ ಫಂಕ್ಷನಲ್ ರಿಜಿಸ್ಟ್ರಾರರೆಂತಲೂ ಕರೆಯುತ್ತಾರೆ.

ಹೀಗಾಗಿ, ಒಟ್ಟಾರೆ ಈ ರಾಜ್ಯದ ಸಹಕಾರಿ ಸಂಸ್ಥೆಗಳ ಸಂಖ್ಯೆ 20,229.

ಕೇರಳ ಸಹಕಾರಿ ಕಾಯ್ದೆಯ ವೈಶಿಷ್ಟ್ಯತೆಗಳು : ಈ ಕಾಯ್ದೆಯಲ್ಲಿ ಹಲವು ವಿಶಿಷ್ಟತೆಗಳನ್ನು ಕಾಣಬಹುದು. ಈ ಎಲ್ಲ ವೈಶಿಷ್ಟ್ಯತೆಗಳು ಕೇರಳ ರಾಜ್ಯದ ಸಹಕಾರ ಕ್ಷೇತ್ರವನ್ನು ಬಲಪಡಿಸುವ ಹಾಗೂ ಅವುಗಳು ಉತ್ತಮವಾಗಿ ಕಾರ್ಯನಿರ್ವಹಿಸಲು ಪೂರಕವಾಗಿವೆ.

**1. ಕೋ-ಆಪರೇಟಿವ್ ಸರ್ವೀಸ್ ಎಕ್ಸಾಮಿನೇಷನ್ ಬೋರ್ಡ್ :** ಕೇರಳ ರಾಜ್ಯದಲ್ಲಿ ಯಾವುದೇ ಸಹಕಾರಿ ಸಂಸ್ಥೆಯಲ್ಲಿ ಹುದ್ದೆಗಳು ಖಾಲಿಯಾದಲ್ಲಿ, ಈ ಬೋರ್ಡ್‌ಗೆ ಪತ್ರದ ಮೂಲಕ ಸಹಕಾರಿಯು ತಿಳಿಸಿದಲ್ಲಿ ಸಿಬ್ಬಂದಿಗಳ ನೇಮಕಾತಿಗೆ ಸಂಬಂಧಿಸಿದಂತೆ ಪರೀಕ್ಷಾ ಪ್ರಕ್ರಿಯೆಯನ್ನು ನಡೆಸಿ, ಪರೀಕ್ಷೆಯಲ್ಲಿ ಆಯ್ಕೆಯಾದ ಸಿಬ್ಬಂದಿಗಳನ್ನು ಸಂದರ್ಶನಕ್ಕಾಗಿ ಸದರಿ ಸಹಕಾರಿಗೆ ಕಳುಹಿಸಿಕೊಡುತ್ತದೆ.

**2. ಕೋ-ಆಪರೇಟಿವ್ ಎಲೆಕ್ಷನ್ ಕಮೀಷನ್ :** 97ನೇ ಸಂವಿಧಾನ ತಿದ್ದುಪಡಿಗಿಂತ ಪೂರ್ವದಲ್ಲಿಯೇ 2010 ರಿಂದ ಕೇರಳ ಚುನಾವಣಾ ಪ್ರಾಧಿಕಾರವು ರಚನೆಯಾಗಿ ಕಾರ್ಯನಿರ್ವಹಿಸುತ್ತಿದೆ.

**3. ಕೋ-ಆಪರೇಟಿವ್ ಎಂಪ್ಲಾಯೀಸ್ ಸೆಲ್ಫ್ ಫೈನಾನ್ಸಿಂಗ್ ಪೆನ್ಷನ್ ಸ್ಕೀಂ :** ಈ ಸ್ಕೀಂನ್ನು 1994ರಲ್ಲಿ ಜಾರಿಗೆ ತರಲಾಗಿದೆ. ಸಹಕಾರಿ ಸಂಸ್ಥೆಯ ಎಲ್ಲಾ ಸಿಬ್ಬಂದಿಗಳು ಈ ಸ್ಕೀಂ ಅನ್ವಯವಾಗುತ್ತದೆ. ಇದಕ್ಕೆ ಡೈರಿ ಸಹಕಾರ ಸಂಸ್ಥೆಯ ಸದಸ್ಯರನ್ನು ಒಳಗೊಂಡಿರುವುದು ಇದರ ವೈಶಿಷ್ಟ್ಯತೆ. ಗರಿಷ್ಠ 15,000/-ದವರೆಗೆ ಪೆನ್ಷನ್ ನೀಡಲಾಗುತ್ತದೆ.

**4. ಕೋ-ಆಪರೇಟಿವ್ ವೆಲ್‌ಫೇರ್ ಮತ್ತು ಡೆವಲಪ್‌ಮೆಂಟ್ ಸ್ಕೀಂ, 2000 :** ಇದರ ಅಡಿಯಲ್ಲಿ ಕಾರ್ಯನಿತರವಲ್ಲದ ಸಹಕಾರ ಸಂಘಗಳ ಪುನರ್‌ಜ್ಜೀವನಕ್ಕಾಗಿ ಯೋಜನಾ ವೆಚ್ಚದ ಶೇ.70 ಪ್ರಮಾಣದವರೆಗೆ ಸರ್ಕಾರದಿಂದ ಮರುಪಾವತಿಯ ಅವಶ್ಯಕತೆ ಇಲ್ಲದ ಧನ ಸಹಾಯ ಮಾಡುತ್ತದೆ. ಇದನ್ನು ಪರಿಶೀಲಿಸಲು ಮತ್ತು ಮೇಲ್ವಿಚಾರಣೆ ಮಾಡಲು ಅಪರ ನಿಬಂಧಕರ ಶ್ರೇಣಿಯ ಅಧಿಕಾರಿಗಳು ಮತ್ತು ಸರ್ಕಾರದಿಂದ ನಾಮ ನಿರ್ದೇಶಿತ ಮಂಡಳಿಯು ಇರುತ್ತದೆ.

**5. ಕೋ-ಆಪರೇಟಿವ್ ಡೆಪಾಸಿಟ್ ಫಂಡ್ ಗ್ಯಾರೆಂಟಿ ಬೋರ್ಡ್ :** ಇದರಲ್ಲಿ ಸಹಕಾರ ಸಂಸ್ಥೆಯ ಠೇವಣಿದಾರರಿಗೆ ರೂ.1,50,000/-ದವರೆಗೆ ಠೇವಣಿ ವಿಮೆಯನ್ನು ಒದಗಿಸಲಾಗುತ್ತದೆ. ಈ ಠೇವಣಿ ಯೋಜನೆಗೆ ಪ್ರಾಥಮಿಕ ಸಹಕಾರ ಸಂಘಗಳು ಪ್ರತಿ 100 ರೂಪಾಯಿಗಳಿಗೆ 10 ಪೈಸೆಯಂತೆ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಪ್ರತಿ 100 ರೂಪಾಯಿಗಳಿಗೆ 3 ಪೈಸೆಯಂತೆ, ರಾಜ್ಯ ಸಹಕಾರಿ ಬ್ಯಾಂಕುಗಳು ಪ್ರತಿ 100 ರೂಪಾಯಿಗಳಿಗೆ 2 ಪೈಸೆಯಂತೆ ವಂತಿಗೆಯನ್ನು ನೀಡಬೇಕು. ಕೇರಳ ರಾಜ್ಯ ಸರ್ಕಾರದ ಸಹಕಾರ ಸಚಿವರು ಈ ಬೋರ್ಡ್‌ನ ಅಧ್ಯಕ್ಷರಾಗಿರುತ್ತಾರೆ.

**6. ಲೋನಿ ಇನ್ಸೂರೆನ್ಸ್ ಸ್ಕೀಂ :** ಸಹಕಾರ ಸಂಘಗಳು ನೀಡಲ್ಪಡುವ ಸಾಲದ ಭದ್ರತೆಗಾಗಿ ಸಾಲಗಾರ ವಿಮಾ ಯೋಜನೆಯನ್ನು ಜಾರಿಗೆ ತರಲಾಗಿದ್ದು, ಪ್ರತಿ 100 ರೂಪಾಯಿಗಳಿಗೆ 35 ಪೈಸೆ ಅಥವಾ 525 ಇದರಲ್ಲಿ ಯಾವುದು ಹೆಚ್ಚು ಆ ಮೊತ್ತವನ್ನು ಸಾಲ ಪಡೆಯುವ ವ್ಯಕ್ತಿಯು ಈ ಯೋಜನೆಗೆ ವಂತಿಗೆಯನ್ನಾಗಿ ಸಹಕಾರಿ ಸಂಘಕ್ಕೆ ಪಾವತಿಸಬೇಕಾಗುತ್ತದೆ.

ಈ ಎಲ್ಲಾ ಯೋಜನೆಗಳನ್ನು ಕೇರಳ ರಾಜ್ಯದ ಸಹಕಾರ ಕಾಯ್ದೆಯಲ್ಲಿಯೇ ನೇರವಾಗಿ ಅಳವಡಿಸಿ, ಜಾರಿಗೆ ತರಲಾಗಿದೆ. ಹಾಗಾಗಿ ಇದು ದೇಶದ ಸಹಕಾರ ಕಾಯ್ದೆಯಲ್ಲಿ ವಿಶಿಷ್ಟ ಕಾಯ್ದೆಯಾಗಿದೆ. ಆದಾಗ್ಯೂ, ಈ ಕಾಯ್ದೆಯಲ್ಲಿನ ಎಲ್ಲಾ ಅವಕಾಶಗಳು ಹಾಗೂ ಯೋಜನೆಗಳು ಸರ್ಕಾರದ ನಿಯಂತ್ರಣದಲ್ಲಿದ್ದು, ಸಹಕಾರ ಸಂಘಗಳಿಗೆ ಸ್ವಾಯತ್ತತೆಯ ಕೊರತೆ ಕಂಡು ಬರುತ್ತದೆ.

**ಸರ್ವೀಸ್ ಕೋ-ಆಪರೇಟಿವ್ ಬ್ಯಾಂಕುಗಳ (ಕೃಷಿ ಪತ್ತಿನ ಸಹಕಾರ ಸಂಘ) ವೈಶಿಷ್ಟತೆಗಳು :**

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಕೇರಳದಲ್ಲಿ ಬ್ಯಾಂಕುಗಳು ಎಂದೇ ಕರೆಯಲಾಗುತ್ತದೆ. ಈ ಸಹಕಾರ ಸಂಘಗಳು ಪತ್ತಿನ ಚಟುವಟಿಕೆಗಳ ಜೊತೆಗೆ ಅನೇಕ ವಿವಿಧೋದ್ದೇಶ ಕಾರ್ಯ ಚಟುವಟಿಕೆಗಳನ್ನು ನಡೆಸುತ್ತಾ ಬಂದಿದೆ. ಅವುಗಳಲ್ಲಿ ಮುಖ್ಯವಾಗಿ ಪಡಿತರ ವಿತರಣಾ ವ್ಯವಸ್ಥೆ, ಪ್ರಾವಿಷನಲ್ ಸ್ಟೋರ್ಸ್, ಮೆಡಿಕಲ್ ಸ್ಟೋರ್ಸ್, ಪೆಟ್ರೋಲ್ ಬಂಕ್‌ಗಳ ನಿರ್ವಹಣೆ, ಮಾರಾಟ ಮಳಿಗೆ, ಟೆಕ್ಸ್‌ಟೈಲ್ ಮತ್ತು ಗೃಹೋತ್ಪನ್ನಗಳ ಮಾರಾಟ ಮಳಿಗೆ, ಮೆಡಿಕಲ್ ಲ್ಯಾಬರೇಟರಿಗಳು ಸೇರಿದಂತೆ ಅನೇಕ ಚಟುವಟಿಕೆಗಳನ್ನು ನಡೆಸುತ್ತಿವೆ.

ಹೀಗೆ, ಕೇರಳ ಸಹಕಾರ ಕಾಯ್ದೆಯಲ್ಲಿ ವೈಶಿಷ್ಟ್ಯತೆಗಳಿದ್ದು, ಸಹಕಾರ ಕ್ಷೇತ್ರದ ಅಭಿವೃದ್ಧಿಯ ದೃಷ್ಟಿಯಿಂದ ಈ ವೈಶಿಷ್ಟತೆಗಳು ಉಳಿದ ರಾಜ್ಯಗಳ ಸಹಕಾರ ಕಾಯ್ದೆಗೆ ಮಾದರಿ ಹಾಗೂ ಅನುಕರಣೀಯವೆಂದು ಹೇಳಬಹುದು. ಈ ಎಲ್ಲ ವೈಶಿಷ್ಟ್ಯತೆಗಳು ಕೇರಳ ರಾಜ್ಯದ ಸಹಕಾರ ಕ್ಷೇತ್ರವನ್ನು ಬಲಪಡಿಸುವ ಹಾಗೂ ಅವುಗಳು ಉತ್ತಮವಾಗಿ ಕಾರ್ಯನಿರ್ವಹಿಸಲು ಪೂರಕವಾಗಿವೆ. ■

# RBI NEWS SEPTEMBER 2015



K.Vittal Shetty

Fourth Bi-monthly Monetary Policy Statement, 2015-16 was announced by Dr. Raghuram G. Rajan, Governor on 29th September 2015

RBI lowered the benchmark repo rate by 50 basis points to 6.75 percent, while keeping CRR and SLR unchanged at 4 percent and 21.5 percent, respectively. This marks the fourth repo rate cut by the RBI since January 2015. However, it has lowered its FY16 GDP growth target to 7.4 percent from 7.6 percent. The repo rate was last at 6.75 percent in March 2011.

Consequently, the reverse repo rate under the LAF stands adjusted to 5.75 per cent, and the marginal standing facility (MSF) rate and the Bank Rate to 7.75 per cent. The fifth bi-monthly monetary policy statement will be announced on December 1, 2015.

| Policy Rates with effect from 29 September 2015 | % |
|---|---|
| POLICY REPO RATE | 6.75% |
| REVERSE REPO RATE | 5.75% |
| MARGINAL STANDING FACILITY RATE | 7.75% |
| BANK RATE | 7.75% |
| Reserve Ratios | % |
| Cash Reserve Ratio | 4% |
| Statutory Reserve Ratio w.e.f. February 7.2015 | 21.5% |

Banks are permitted to hold investments under the HTM category in excess of the limit of 25 per cent of their total investments, provided the excess comprises only SLR securities and the total SLR securities held under the HTM category are not more than 22 per cent of NDTL. The SLR has been reduced to 21.50 per cent of NDTL with effect from February 7, 2015.

To align them, it has been decided to bring down the ceiling on SLR securities under HTM from 22 per cent to 21.50 per cent with effect from the fortnight beginning January 9, 2016. Thereafter, both the SLR and the HTM ceiling will be brought down by 0.25 per cent every quarter till March 31, 2017.

## IMPORTANT NEWS

Date: Sep 01, 2015- RBI seeks comments/feedback on Draft Guidelines on Computation of Base Rate based on Marginal Cost of Funds methodology.

**Revised Methodology :** On the basis of supervisory findings and discussions with banks, the extant guidelines on computation of Base Rate as well as the methodology for determining lending rates have been reviewed. The banks will now be required to compute their Base Rate as under :

**(a) Components of Base Rate :** The components of Base Rate will include Cost of Funds, Negative Carry on CRR/SLR, Un-allocable overhead costs and Average return on Net worth which will be calculated as under:

**(i) Cost of Funds :** The marginal cost of funds should be used for computing the cost of funds. The marginal cost should be arrived at by taking into consideration all sources of fund other than equity. Cost of deposits should be calculated using the latest interest rate/card rate payable on current and savings deposits and the term deposits of various maturities. Cost of borrowings should be arrived at using the average rates at which funds were raised in the last one month preceding the date of review. Each of these rates should be weighted by the proportionate balance outstanding on the date of review.

**(ii) Negative carry on CRR and SLR**

**(iii) Un-allocable overhead cost**

**(iv) Average Return on net worth Spread**

(b) As advised in our circular DBR.Dir.BC.No.63/13.03.00/2014-15 dated January 19, 2015, banks should delineate the components of spread with the approval of their Boards. For the sake of uniformity in these components, broad components of spread finalised by IBA should be adopted by all banks.

(c) The actual lending rates on the loans will be determined by adding the components of spread to the Base Rate in all cases.

(d) All other stipulations mentioned in the circulars DBOD. No.Dir.BC.88/13.03.00/2009-10 dated April 9, 2010 and DBR. Dir. BC.No.63/13.03.00/2014-15 dated January 19, 2015 will continue.

(e) In order to give sufficient time to all the banks to adopt the above as well as the spread guidelines contained in our circular dated January 19, 2015, the proposed effective date of these guidelines is April 1, 2016.

(f) Banks should submit a road map clearly indicating the time frame for adopting the above to our Department of Banking Supervision, Central Office within a period of two months from the date of the final circular.

**Date : Sep 01, 2015: Changes in RTGS time window**

The RTGS time window with effect from September 1, 2015 will be as under:

| Sr. No. | Time Event | Regular days including Saturdays, except Second and Fourth Saturdays of the Month |
|---|---|---|
| 1. | Open for Business | 08:00 hours |
| 2. | Initial Cut-off (Customer transactions) | 16:30 hours |
| 3. | Final Cut-off (Inter-bank transactions) | 19:45 hours |
| 4. | IDL Reversal | 19:45 hours - 20:00 hours |
| 5. | End of Day | 20:00 hours |

**Date : Sep 14, 2015: RBI releases Primary (Urban) Co-operative Banks' Outlook**

The first volume of the annual publication titled 'Primary (Urban) Co-operative Banks' Outlook 2013-14'.

The publication covers the financial accounts of Scheduled and Non-Scheduled Primary (Urban) Co-operative Banks for the financial year 2013-14. The publication provides aggregate information on major items of Balance Sheet, Profit and Loss Accounts, non-performing assets, financial ratios, state-wise distribution of offices and details of priority sector advances. In addition to that, the publication provides bank-wise information of Scheduled Primary (Urban) Co-operative Banks on select financial ratios on Capital Adequacy, Profitability, and Employee Productivity.

**Date: Sep 16, 2015: RBI grants "In-principle" Approval to 10 Applicants for Small Finance Banks**


The "in-principle" approval granted will be valid for 18 months to enable the applicants to comply with the requirements under the Guidelines and fulfil other conditions as may be stipulated by the RBI. Until a regular licence is issued, the applicants cannot undertake any banking business. Going forward, the Reserve Bank intends to use the learning from this licensing round to appropriately revise the Guidelines and move to giving licences more regularly, that is, virtually "on tap".

**Date: Sep 22, 2015:** RBI to issue 500 and 1000 Banknotes with Three Additional Features

The Reserve Bank of India will shortly put into circulation banknotes in the denominations of 500 and 1000 incorporating three new/revised features.

All banknotes in these denominations issued hitherto by the Reserve Bank will continue to be legal tender.

**Details of New Features :**




(i) Ascending size of numerals in numbering panels:

Numerals in both the numbering panels of banknotes will be in ascending size from left to right, while the first three alpha-numeric characters will remain constant in size.

(ii) Bleed lines:

The banknotes of 500 denomination will have five angular bleed lines in three sets of 2-1-2 lines on the obverse in both, the upper left and the right hand edge of the banknote. Similarly, 1000 banknotes will have six angular bleed lines in four sets of 1-2-2-1 lines on the obverse in both, the upper left and right hand edge of the banknotes. These will facilitate identification of these notes by visually impaired persons.

(iii) Enlarged Identification Mark:

The existing identification mark (circular-shape in 500 and diamond in 1000) near the left edge of the banknote has been enlarged.

**Cancellation, Withdrawl, Penalties and Directions on Urban Co-operative Banks**

Date: Sep 03, 2015-RBI issues directions to Choundeshwari Sahakari Bank Ltd, Ichalkaranji, Kolhapur.

**Date: Sep 09, 2015:** RBI issues Directions to Nashik Jilha Girna Sahakari Bank Ltd., Nashik, Maharashtra.

**Date: Sep 09, 2015:** RBI issues Directions to Shree Govardhansinghji Raghuvanshi Sahakari Bank Ltd., Nandurbar, Maharashtra.

**Date: September 09, 2015:** RBI imposes Monetary Penalty of 50,000 (Rupees Fifty Thousand only) on Sree Chaitanya Co-operative Bank Ltd., Nadia (West Bengal).

**Date: September 09, 2015:** RBI issues Directions to The Vaish Co-operative Commercial Bank Ltd., New Delhi.

**Date: September 10, 2015:** RBI further extends Directions issued to Shri Chhatrapati Urban Co-operative Bank Ltd., Pimple Nilakh, District - Pune, Maharashtra.

**Date: Sep 10, 2015:** RBI extends Directions issued to the Indian Mercantile Co-operative Bank Ltd., Lucknow, Uttar Pradesh.

**Date: Sep 18, 2015:** RBI imposes Monetary Penalty of 5.00 lakh (Rupees Five Lakh Only) on The Kurmanchal Nagar Sahkari Bank Ltd., Nainital, Uttarakhand. for violation of the directive/ guideline of the RBI on loans an

**Date: Sep 23, 2015:** RBI extends Directions issued to the Pioneer Urban Co-operative Bank Ltd., Lucknow, Uttar Pradesh.

**Date: Sep 29, 2015:** RBI further extends Directions issued to Shree Ganesh Sahakari Bank Ltd., Nashik, Maharashtra.

**Date: Sep 30, 2015:** RBI issues Directions to Ajinkyatara Sahakari Bank Ltd., Satara, Maharashtra.

**Date: Sep 30, 2015:** Directions to Commercial Co-operative Bank Ltd., Kanpur, Uttar Pradesh.

**Source: www.rbi.org.in**



# ವ್ಯಾಪಾರೋದ್ಯಮ ಮತ್ತು ಸಹಕಾರಿ ಸಂಸ್ಥೆಗಳಲ್ಲಿ ಸೇವೆಗಳನ್ನು ವೃದ್ಧಿಪಡಿಸುವ ಪದ್ಧತಿಗಳು

ಡಾ॥ ನಂದೀಶ ವಿ. ಹಿರೇಮಠ, ಪ್ರೊಫೆಸರ್, ಸಹಕಾರಿ ತರಬೇತುದಾರರು, ಕನ್ಸಲ್ಟೆಂಟ್ ಮತ್ತು ಆಡಳಿತ ಸಲಹೆಗಾರರು, ಬೆಂಗಳೂರು.

### ವ್ಯಾಪಾರೋದ್ಯಮ ಮತ್ತು ಸಂಸ್ಥೆಗಳು

ಪ್ರತಿಯೊಂದು ಸಂಸ್ಥೆಯ ಅಸ್ತಿತ್ವ ಮತ್ತು ಬೆಳವಣಿಗೆಗೆ, ಅದು ತನ್ನ ಉತ್ಪನ್ನ (Product) ಅಥವಾ ಸೇವೆ (Service) ಗಳನ್ನು ಗ್ರಾಹಕರಿಗೆ ನೀಡಬೇಕಾಗುತ್ತದೆ. ಉತ್ಪನ್ನಗಳ ವ್ಯವಹಾರ ಮಾಡುವುದು ಸರಳ. ಏಕೆಂದರೆ, ಗ್ರಾಹಕರು ನೋಡಬಹುದು, ಮುಟ್ಟಬಹುದು, ಅನುಭವಿಸಬಹುದು. ಆದರೆ, ಸೇವೆಗಳನ್ನು ಮಾರುಕಟ್ಟೆ ಮಾಡಲು ವಿನೂತನ ಪದ್ಧತಿಗಳನ್ನು ಅಳವಡಿಸಬೇಕಾಗುತ್ತದೆ.

### ಸೇವೆಗಳ ಮಾರಾಟ (Service Marketing)

ಸೇವೆಗಳಿಗೆ ಒಂದು ಸಂಪೂರ್ಣ ಅರ್ಥ ಕೊಡುವುದು ಕಷ್ಟ. ಏಕೆಂದರೆ, ಸಂಸ್ಥೆಗನುಗುಣವಾಗಿ ಅದರ ಪರಿಧಿ ಬದಲಾಗುತ್ತದೆ. ಸಂಸ್ಥೆಗನುಸರಿಸಿ ಸೇವೆಗಳು, ಅವುಗಳ ಮಹತ್ವ ಮತ್ತು ವಿವಿಧತೆಗಳು ಬದಲಾಗುತ್ತವೆ. ಉದಾಹರಣೆಗೆ ಒಬ್ಬ ಹೃದಯಘಾತ ಆದ ವ್ಯಕ್ತಿಗೆ ಎರಡು ಗಂಟೆ ಒಳಗೆ ಸೂಕ್ತ ವೈದ್ಯರ ಸೇವೆ ದೊರಕದಿದ್ದರೆ ಅದು ಪ್ರಾಣಕ್ಕೆ ತೊಂದರೆದಾಯಕ. ಅದೇರೀತಿ, ಒಬ್ಬ ಮೆಕ್ಯಾನಿಕ್ ಬೈಕ್/ ಕಾರನ್ನು ರಿಪೇರಿ ಮಾಡಲು ವೇಳೆ ತೆಗೆದುಕೊಳ್ಳಬಹುದು. ಆದರೆ, ಹಣಕಾಸಿನ ವ್ಯವಹಾರದಲ್ಲಿರುವ ಸಂಸ್ಥೆಗಳಲ್ಲಿ ಸೇವೆಗಳು ತನ್ನದೇ ಆದ ಮಹತ್ವ ಹೊಂದಿವೆ. ಏಕೆಂದರೆ, ವಿವಿಧ ರೀತಿಯ ಸೇವೆಗಳನ್ನು ಗ್ರಾಹಕರಿಗೆ ಅನುಗುಣವಾಗಿ ನಿರೂಪಿಸಿ, ತಯಾರಿಸಿ ನೀಡುವ ಜವಾಬ್ದಾರಿಯಿದೆ. ಈ ರೀತಿ ಸೇವೆಗಳಿಂದ ಎಲ್ಲರಿಗೂ (ಸಂಸ್ಥೆಗೆ, ಗ್ರಾಹಕರಿಗೆ, ಸಮಾಜಕ್ಕೆ, ದೇಶಕ್ಕೆ) ಉಪಯೋಗವಾಗಬೇಕು.

ಭಾರತದ ಒಟ್ಟು ದೇಶದ ವರಮಾನದಲ್ಲಿ (ಉಆಕ) 58%ರಷ್ಟು ಸೇವೆಗಳಿಂದ ಬರುತ್ತಿದೆ. ಅದು ಕೆನಡಾದಲ್ಲಿ 67% ಇದ್ದರೆ, ಅಮೇರಿಕಾದಲ್ಲಿ 70% ಇದೆ. ನಮಗೆ ಸ್ವಾತಂತ್ರ್ಯ ಬಂದಾಗ ಸೇವೆಗಳಿಂದ ಬರುವ ವರಮಾನ ಕೇವಲ 15%ರಷ್ಟು ಇತ್ತು!

### ಸೇವೆಗಳ ವಿವಿಧತೆಗಳು

'ಗ್ಯಾಟ್ಸ್' (General Agreement on Trade in Services) ಪ್ರಕಾರ 155 ರೀತಿಯ ಸೇವೆಗಳನ್ನು ಮುಖ್ಯವಾಗಿ 11 ವಿವಿಧ ವಂಗಡಗಳಲ್ಲಿ ವರ್ಗೀಕರಣ ಮಾಡಲಾಗಿದೆ.

1. ವ್ಯಾಪಾರ ಸೇವೆಗಳು (Business Service)
2. ಸಂಪರ್ಕ ಮಾಧ್ಯಮ ಸೇವೆಗಳ (Communication Service)
3. ಇಂಜಿನಿಯರಿಂಗ್ ಸೇವೆಗಳು (Engineering Service)
4. ವಿತರಣೆಯ ಸೇವೆಗಳು (Distribution Service)
5. ವಿದ್ಯಾಭ್ಯಾಸದ ಸೇವೆಗಳು (Education Service)
6. ಪರಿಸರದ ಸೇವೆಗಳು (Environment Service)
7. ಹಣಕಾಸಿನ ಸೇವೆಗಳು (Financial Service)
8. ಆರೋಗ್ಯದ ಸೇವೆಗಳು (Health Service)
9. ಪ್ರವಾಸೋದ್ಯಮ ಸೇವೆಗಳು (Tourism Service)
10. ಮನರಂಜನೆ ಸೇವೆಗಳು (Recreation Service)
11. ಸಾರಿಗೆ ಸೇವೆಗಳು (Transport Service)

ಸಹಕಾರಿ ಸಂಸ್ಥೆಗಳ ಸೇವೆಗಳು "ಹಣಕಾಸಿನ ಸೇವೆಗಳು" ಎಂಬ ವಿಂಗಡಣೆಯಲ್ಲಿ ಬರುವುದನ್ನು ಕಾಣಬಹುದು. ಇದರಲ್ಲಿ ಆರೋಗ್ಯ ಸೇವೆಗಳು ಹೆಚ್ಚಿನ ಸಂಬಂಧವಿದ್ದರೆ, ಸಂಪರ್ಕ ಮಾಧ್ಯಮದಲ್ಲಿ ರೇಡಿಯೋ ಸೇವೆಯಲ್ಲಿ ಸಂಬಂಧ ಕಡಿಮೆ ಇರುತ್ತದೆ. ಆದರೆ, ಹಣಕಾಸಿನ ಸೇವೆಗಳಲ್ಲಿ ಸಂಬಂಧ ಮಾಧ್ಯಮ ತರಗತಿ ಇರುತ್ತದೆ ಹಾಗೂ ಒಂದು ರೀತಿ ವಿಶೇಷತೆ ಹೊಂದಿದೆ.

### ಹಣಕಾಸಿನ ಸೇವೆಗಳನ್ನು ವೃದ್ಧಿಪಡಿಸುವ ಪದ್ಧತಿಗಳು

ಈ ಸೇವೆಗಳನ್ನು ಮುಟ್ಟಲಾಗುವುದಿಲ್ಲ. ಆದರೆ, ಅನುಭವಿಸಬೇಕು. ಈ ಸೇವೆಗಳು ವಿವಿಧತೆಯಲ್ಲಿ ಅನೇಕತೆ ಜೊತೆ ಒಂದು ಸೇವೆಯಿಂದ ಮತ್ತೊಂದು ಸೇವೆಯನ್ನು ಬೇರ್ಪಡಿಸಲು ಸಾಮಾನ್ಯವಾಗಿ ಕಷ್ಟದ ಕೆಲಸ, ಆದಾಗ್ಯೂ "ಗ್ರಾಹಕರಿಗೆ ಸಂಪೂರ್ಣ ಸಂತೃಪ್ತಿ" ಆಗುವಂತೆ ಸೇವೆಗಳನ್ನು ನೀಡುವುದು ಅವಶ್ಯ, ಅನಿವಾರ್ಯ ಹಾಗೂ ಮುಖ್ಯತೆ ಹೊಂದುತ್ತದೆ.

- ಸೇವೆಗಳನ್ನು ಸೂಕ್ತವಾದ ಜಾಗದಲ್ಲಿ (ಸಂಸ್ಥೆಗಳ ಬ್ರಾಂಚ್ ಮೂಲಕ) ನೀಡಬಹುದು.
- ಸೇವೆಗಳು ಸೂಕ್ತವಾದ ಖರ್ಚಿನಲ್ಲಿ ನೀಡಬೇಕು. ಹೆಚ್ಚಿನ ವೆಚ್ಚವಾದರೆ ಗ್ರಾಹಕರು ಸಿಗುವುದಿಲ್ಲ. ಅತಿ ಕಡಿಮೆ ಬೆಲೆ ಇದ್ದರೆ ಸಂಸ್ಥೆಗೆ ಉಪಯೋಗವಾಗುವುದಿಲ್ಲ.
- ಗ್ರಾಹಕರ ಜೊತೆಗಿನ ವ್ಯವಹಾರಗಳಲ್ಲಿ ಕೆಲಸ ಮಾಡುವರ ಪಾತ್ರ ಬಹುಮುಖ್ಯವಾಗುತ್ತಿದೆ. ಗ್ರಾಹಕರ ಅವಶ್ಯಕತೆಗಳಿಗೆ ಅನುಗುಣವಾಗಿ ಸೇವೆಗಳನ್ನು ನೀಡುವುದು ಸಂಸ್ಥೆಗಳ ಕರ್ತವ್ಯ.
- ಸೇವೆಗಳು ಮಾರಾಟದಲ್ಲಿ (Service Marketing)ಮೂರು

Swabhimani Sahakari, Monthly, Posting Day 8th.
Posted at Bangalore PSO, Mysore Road, Bangalore 560026
Registered No. RNP/BGW/1744/2014-16. RNI No. KARBIL - 2004/18001. Pages 28

ವಿವಿಧತೆಗಳಿವೆ.

1) ಆಂತರಿಕ ಮಾರಾಟ (Internal Marketing)
2) ಬಾಹ್ಯ ಮಾರಾಟ (External Marketing)
3) ಸಂಪರ್ಕ ಮಾಧ್ಯಮದ ಮಾರಾಟ (Interactive Marketing)

**ಸೇವಾ ಸಂಸ್ಥೆಗಳು ಪ್ರಗತಿ ಹೊಂದಲು ಬಾಹ್ಯ ಮತ್ತು ಸಂಪರ್ಕ ಮಾಧ್ಯಮ ಮಾರಾಟ ಮಹತ್ವ ಪಾತ್ರ ವಹಿಸುತ್ತವೆ.**

▶ ಸೇವೆ ನೀಡುವಾಗ ಸೇವೆ ನೀಡುವ ಉದ್ಯೋಗಿಗಳಿಗೆ ಗ್ರಾಹಕರ ಜೊತೆ ಹೇಗೆ ವ್ಯವಹರಿಸಬೇಕು ಎನ್ನುವ ಜ್ಞಾನ ಮತ್ತು ಕೌಶಲ್ಯಗಳು ಬೇಕಾಗುತ್ತವೆ.

▶ ಗ್ರಾಹಕರನ್ನು 3 ವಿವಿಧ ರೀತಿಯಲ್ಲಿ ಸೇವೆಗನುಗುಣವಾಗಿ ವಿಂಗಡಿಸಿದಾಗ

1. ಗ್ರಾಹಕರ ನಿರೀಕ್ಷೆಗಳು (Customer Expectation)
2. ತಕ್ಕ ಸೇವೆಗಳು (Adequate Service)
3. ಸೂಕ್ತ ಸೇವೆಗಳು (Desired Service)

ನಾವು ತಕ್ಕದಾಗ ಮತ್ತು ಸೂಕ್ತವಾದ ಸೇವೆಗಳನ್ನು ನೀಡಿದಾಗ, ಸಂಸ್ಥೆಗಳು ಅಭಿವೃದ್ಧಿಗೆ ಸಹಾಯಕಾರಿಯಾಗುತ್ತವೆ. ಏಕೆಂದರೆ ಗ್ರಾಹಕರು ನಿರೀಕ್ಷೆ ಮಾಡಿದ ಹಂತಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಸೇವೆಗಳನ್ನು ಲಭ್ಯಗೊಳಿಸಲಾಗುತ್ತದೆ.

▶ ಸಂಸ್ಥೆಯ ಉದ್ಯೋಗಿಗಳು ಗ್ರಾಹಕರು ಸೂಕ್ತ ನಿರ್ಧಾರ ಮಾಡುವಲ್ಲಿ ಸಹಾಯ ಹಸ್ತ ನೀಡಿದರೆ, ಸಂಸ್ಥೆಯ ಸೇವೆಗಳು ಅಭಿವೃದ್ಧಿ ಜೊತೆ ಅದರ ಪ್ರಗತಿಯನ್ನು ಹೆಚ್ಚಿಸುವಲ್ಲಿ ಸಹಾಯಕಾರಿಯಾಗುತ್ತದೆ.

▶ ಸೇವೆಗಳನ್ನು ನೀಡುವಾಗ ಸೂಕ್ತತೆ (Appropriateness), ವೇಗ (Speed), ಅನುಕೂಲತೆ (Comfort), ಅನ್ಯೋನ್ಯತೆ (Customer Intimacy), ಬೆಲೆ (Price) ಮುಂತಾದ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು.

▶ ಸೇವೆಗಳಿಗೆ ಅನುಗುಣವಾಗಿ ಅವುಗಳನ್ನು ವಿಂಗಡಣೆ ಮಾಡಿ (Segmentation) ತಕ್ಕದಾದ ಗ್ರಾಹಕರಿಗೆ ಸೇವೆ ನೀಡಿ (Targeting Customers) ಮತ್ತು ಅವಶ್ಯಕತೆಗಳಿಗೆ ಅನುಗುಣವಾಗಿ ಸೇವೆಗಳನ್ನು ನೀಡಿ (Positioning)ದಾಗ ಯಶಸ್ಸು ನಿಶ್ಚಿತ ಹಾಗೂ ಸಂಸ್ಥೆಯ ಅಭಿವೃದ್ಧಿಯು ಖಚಿತ.

**ನಾವೆಲ್ಲಾ ಗೆಲ್ಲೋಣ**

ಪ್ರತಿಯೊಂದು ಸಂಸ್ಥೆಯು ತಮ್ಮ ಸೇವೆಗಳು ವೈವಿಧ್ಯಮಯ ವಾಗುವಂತೆ ನೋಡಿಕೊಳ್ಳುವುದು ಬಹುಮುಖ್ಯವಾಗುತ್ತದೆ. ಅದರಿಂದ ತಮ್ಮದೇ ಆದ ಒಂದು ಛಾಪು (Brand)ನಿಂದ ಸೇವೆಗಳನ್ನು ಮಾರಾಟ ಮಾಡಿದರೆ ಲಾಭಾಂಶದಿಂದ ವ್ಯವಹಾರ ಮಾಡುತ್ತಾ, ಗ್ರಾಹಕರನ್ನು ಗೆಲ್ಲುತ್ತ, ಅಭಿವೃದ್ಧಿ ಹೊಂದುವುದು ಸುಲಭಸಾಧ್ಯವಾದ ಕೆಲಸ. ■

**62ನೇ ಅಖಿಲ ಭಾರತ ಸಹಕಾರ ಸಪ್ತಾಹ : ನವೆಂಬರ್ 14 ರಿಂದ 20ರವರೆಗೆ ರಾಷ್ಟ್ರದಾದ್ಯಂತ ಆಚರಣೆ.**

ಇವರಿಂದ ಪ್ರಕಟಿತ :

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**

ನಿರ್ಮಾಣ ಭವನ ಆವರಣ, ಡಾ. ರಾಜಕುಮಾರ ರಸ್ತೆ, 1ನೇ ಬ್ಲಾಕ್ ರಾಜಾಜಿನಗರ. ಬೆಂಗಳೂರು – 10.

web : www.souharda.coop, E-mail : souharda@souharda.coop,

**ದೂ.ಸಂ :** 23378375/76/77/78/79/80 & 23474408, 23573291

ಸಂಪಾದಕ, ಪ್ರಕಾಶಕ : **ಶರಣಗೌಡ ಜಿ. ಪಾಟೀಲ,** ಸಂಚಿಕೆ

ಸಂಚಿಕೆ ಸಿದ್ಧತೆ : **ವಿ.ಜೆ. ಕಾರಕೂನ**

ವಿನ್ಯಾಸ : **ವರ್ಣ ಕಮ್ಯುನಿಕೇಷನ್ಸ್**

ಮುದ್ರಣ : ಶಕ್ತಿ ಪ್ರಿಂಟೆಕ್, ಬೆಂಗಳೂರು.

**ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು**

| ಹೆಸರು | ಪದನಾಮ | ದೂರವಾಣಿ |
|---|---|---|
| ಶ್ರೀ ಗುರುನಾಥ ಜಾಂತಿಕರ | ಅಧ್ಯಕ್ಷರು | 8884466701 |
| ಶ್ರೀ ಹೆಚ್. ವಿ. ರಾಜೀವ್ | ಉಪಾಧ್ಯಕ್ಷರು | 8884466702 |
| ಶ್ರೀ ಶರಣಗೌಡ ಜಿ. ಪಾಟೀಲ | ವ್ಯವಸ್ಥಾಪಕ ನಿರ್ದೇಶಕರು | 8884466703 |
| ಶ್ರೀ ನಾರಾಯಣ ಹೆಗಡೆ | ಉಪಪ್ರಧಾನ ವ್ಯವಸ್ಥಾಪಕರು | 8884466704 |
| ಶ್ರೀ ವೈ. ಕುಮಾರ್ | ಉಪಪ್ರಧಾನ ವ್ಯವಸ್ಥಾಪಕರು | 8884466705 |
| ಶ್ರೀ ಶ್ರೀಕಾಂತ್ ಬರುವೆ | ಸಹಪ್ರಧಾನ ವ್ಯವಸ್ಥಾಪಕರು | 8884466706 |
| ಶ್ರೀ ರಘುನಂದನ್ ಕೆ. | ಸಹಪ್ರಧಾನ ವ್ಯವಸ್ಥಾಪಕರು | 8884466707 |
| ಶ್ರೀಮತಿ ಕೃತಿ ಜನಾರ್ಧನ್ | ಬೆಂಗಳೂರು ವಿಭಾಗಾಧಿಕಾರಿ | 8884466708 |
| ಶ್ರೀಮತಿ ಶೋಭಾ ಆರ್. | ಸಹಪ್ರಧಾನ ವ್ಯವಸ್ಥಾಪಕರು | 8884466709 |
| ಶ್ರೀ ವಿ.ಜೆ. ಕಾರಕೂನ | ತರಬೇತಿ ಅಧಿಕಾರಿ | 8884466710 |
| ಶ್ರೀ ಜಿ.ಎಸ್. ಟೋಪ್ಪಣ್ಣವರ್ | ಬೆಳಗಾವಿ ವಿಭಾಗಾಧಿಕಾರಿ | 8884466711 |
| ಶ್ರೀ ಶಿವಕುಮಾರ ಬಿರಾದಾರ | ಮೈಸೂರು ವಿಭಾಗಾಧಿಕಾರಿ | 8884466712 |
| ಶ್ರೀ ಸಂಜಯ್ ಕೋರಟಕರ | ಕಲಬುರಗಿ ವಿಭಾಗಾಧಿಕಾರಿ | 8884466714 |

ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್,1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1–ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು– 560 010. ದೂ: 080 – 23525546
ಮೈಸೂರು ವಿಭಾಗೀಯ ಕಛೇರಿ : ನಂ. 200, ಶಂಕರ ಮಠ ಮುಖ್ಯರಸ್ತೆ, ಕಿಲ್ಲೇ ಮೊಹಲ್ಲಾ, ಮೈಸೂರು. ದೂ : 0821 – 2332299
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂ : 0831 – 2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ ಗಾರ್ಡನ್ ರಸ್ತೆ, ಕಲಬುರಗಿ – 585102. ದೂ: 08472 – 270222.

Edited, Printed and Published by Sharangouda G. Patil – Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010